




ಈ-ಬೆಂಗಳೂರು ಬೆರಗು
E-Bengaluru Beragu

★ E-Bengaluru Beragu ★
MAG (2) PRB/CR/36/24-25
T/KN2024/2076

# ಈ-ಬೆಂಗಳೂರು ಬೆರಗು

ಸಂಪುಟ: 2 Vol: 2 ಸಂಚಿಕೆ: 8 Issue: 8 ಡಿಸೆಂಬರ್ 15 - 31 ಪುಟಗಳು: 12 Pages: 12 ಬೆಲೆ: 15.00 ರೂ.

## ಹೊಸ ವರ್ಷದ ಹೊನಲು







## ದೇಶೀ ಕ್ರಿಕೆಟ್‌ನಲ್ಲಿ ಶತಕಗಳ ಭರಾಟೆ

## ಬೆಳಗಾವಿ ಅಧಿವೇಶನ ಮುಂದಿನ ಮುಖ್ಯಮಂತ್ರಿ ಬದಲಾವಣೆ ಚರ್ಚೆ




## ಕಳೆದ ವರ್ಷದ ಕಹಿ ನೆನಪುಗಳು





ಸಂಪಾದಕರ ಪುಟ





**ವೈಕುಂಟ ಏಕಾದಶಿಯ ವಂದನೆಗಳು**

## ಮುನ್ನುಡಿ

ಹೊಸ ವರುಷದ ಶುಭಾಶಯ

ಬಾ ವರುಷ ಬೆಳಕಿನಡೆಗೆ

ಕಳೆದ ವರುಷದ ಕಗ್ಗತ್ತಲೆಂಬ ಹೊಸ್ತಿಲ ದಾಟಿ

ಹೊಸ ವರುಷದ ಹಸಿಯುಸಿರಲಿ ಹಳೆ ನೆನಪನು ಅಳಸುವ ಮುನ್ನ

ಬಾ ವರುಷ ಬೆಳಕಿನಡೆಗೆ...........

ಸಡಗರದ ಸಂಕ್ರಾಂತಿ ಸುಗ್ಗಿಯ ಸಂತಸ ಸರಿಯುವ ಮುನ್ನ......

ವಸಂತನು ವಸುಂಧರೆಗೆ ಹೊಸ ವರುಷದ ಹೊಸ ಉಡುಪನು ತೊಡಿಸುವ ಮುನ್ನ......

ಶ್ರಾವಣದ ಮುಂಗಾರಿನ ಮುತ್ತಿನ ಹನಿಯು ಧರೆಗೆ ಮುತ್ತಿಕ್ಕುವ ಮುನ್ನ......


ಆನಂದದಾಡವ ಚಂದದ ಶರತ ಚಂದಿರನು ಕಾರ್ತಿಕ ಮುಸ್ಸಂಜೆಯಲಿ ಮೂಡುವ ಮುನ್ನ........

ಲಕ್ಷೋಪ ಲಕ್ಷ ಕಾರ್ತಿಕ ದೀಪಗಳ ದೀಪಾವಳಿಯು ಭುವಿ ಬಾನಿನ ಬೆಳಕಲಿ ಬತ್ತಿ ಹೋಗುವ ಮುನ್ನ.......

ಕದ ತಟ್ಟಿ ಬೆಚ್ಚನೆ ಸ್ಪರ್ಶವ ನೀಡುವ ಏಯ್ ಹೊಸ ಹೊಸ ವರುಷವೇ......

ಈ ಧರೆಗೆ ಹಸಿರನು ಪಸರಿಸಿ ಜಯ ಶುಭದ ಸಿರಿಯ ತಾ............

ಬಾ ವರುಷ ಬೆಳಕಿನಡೆಗೆ....



## ಹೊಸ ವರ್ಷಾಚರಣೆ: ನಗರದೆಲ್ಲೆಡೆ ಬಿಗಿ ಭದ್ರತೆ

ಬೆಂಗಳೂರು: ಹೊಸ ವರ್ಷದ ಸಂಭ್ರಮಾಚರಣೆ ವೇಳೆ ನಗರದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಅಭೂತಪೂರ್ವ ಭದ್ರತೆಯನ್ನು ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಡಾ. ಪರಮೇಶ್ವರ್ ಅವರು ತಿಳಿಸಿದ್ದಾರೆ.

ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೋಮವಾರ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ದೊಡ್ಡ ಪ್ರಮಾಣದಲ್ಲಿ ಜನ ಸೇರುವ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಪಬ್‌ಗಳು, ರೆಸ್ಟೋರೆಂಟ್‌ಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಭದ್ರತೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ನಗರದ 20 ಸಾವಿರ ಪೊಲೀಸ್ ಅಧಿಕಾರಿ ಸಿಬ್ಬಂದಿ ಹೊರತು ಪಡಿಸಿ ರಾಜ್ಯ ಮೀಸಲು ಪಡೆ ಜೊತೆಗೆ ಹೊರ ಜಿಲ್ಲೆಗಳಿಂದಲೂ ಅಗತ್ಯ ಬಿದ್ದರೆ ಸಿಬ್ಬಂದಿಯನ್ನು ಕರೆಸಿ ಕೊಳ್ಳಲಾಗುವುದು, ಕೇಂದ್ರ ವಿಭಾಗ, ಪೂರ್ವ ವಿಭಾಗ, ಆಗ್ನೇಯ ವಿಭಾಗಗಳಲ್ಲಿ ಹೆಚ್ಚಿನ ಜನಸಂಖ್ಯೆ ಸೇರುವ ಮಾಹಿತಿ ಯನ್ನು ಆಧರಿಸಿ ಭದ್ರತೆಯನ್ನು ಬಿಗಿಗೊಳಿಸಲಾಗುವುದು ಎಂದು ಹೇಳಿದರು.

ಹೊಸವರ್ಷದ ಡಿ. 31ರ ರಾತ್ರಿ 8ರಿಂದ ಮುಂಜಾನೆಯ ವರೆಗೆ ನಗರದ ಎಲ್ಲೆಡೆ ಭದ್ರತೆಯನ್ನು ಕೈಗೊಂಡು ವಾಹನಗಳ ತಪಾಸಣೆ ಚುರುಕುಗೊಳಿಸಲಾಗುವುದು ಬಾಂಬ್ ನಿಷ್ಕ್ರಿಯ ಪಡೆ, ಶ್ವಾನದಳ, ಸಂಚಾರಿ ಪೊಲೀಸರು, ನಗರ ಸಶಸ್ತ್ರ ಪಡೆ, ಹೋಂ ಗಾರ್ಡ್ಸ್‌ಗಳನ್ನು ಭದ್ರತೆಗೆ ಬಳಸಲಾಗುವುದು ಎಂದು ತಿಳಿಸಿದರು.

ನಗರದ ಎಲ್ಲಾ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರ ವನ್ನು ಡಿ. 31ರ ರಾತ್ರಿ ಸಂಪೂರ್ಣ ಬಂದ್ ಮಾಡಲಾಗುವುದು, ಮುಖ್ಯವಾಗಿ ಬೆಂಗಳೂರು ಕೇಂದ್ರ ವಿಭಾಗದ ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ರಸ್ತೆ, ಕಮರ್ಷಿಯಲ್ ರಸ್ತೆಗಳಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ವಿಶೇಷ ಜಾಗವನ್ನು ನಿಗಧಿಪಡಿಸಲಾಗುವುದು ಎಂದು ಹೇಳಿದರು.

ಹೊಯ್ಸಳ, ಚೀತಾ ಮತ್ತು ಕೋಬ್ರಾ ವಾಹನಗಳನ್ನು ಹೆಚ್ಚಿನ ಗಸ್ತು ತಿರುಗಲಿದ್ದು, ಯಾವುದೇ ಸಣ್ಣಪುಟ್ಟ ಘಟನೆ ನಡೆದರೂ ಕೆಲವೇ ನಿಮಿಷದಲ್ಲಿ ಪೊಲೀಸರು ಧಾವಿಸುವಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ನಗರದ ಎಲ್ಲಾ ಪೊಲೀಸ್ ಪೇದೆಯಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೆ ಎಲ್ಲರೂ ಕರ್ತವ್ಯದಲ್ಲಿರಲು ಸೂಚನೆ ನೀಡಲಾಗಿದೆ ಹಿರಿಯ ಅಧಿಕಾರಿಗಳು ನಗರದ ಎಲ್ಲೆಡೆ ಸಂಚರಿಸಿ ಪರಿಸ್ಥಿತಿಯ ಮೇಲೆ ನಿಗಾ ವಹಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ನಗರದ್ಯಾಂತ 1,500 ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದ್ದು ಗಡಿಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಯಾವುದೇ ಘಟನೆ ಸಂಭವಿಸಿದರೆ ತಕ್ಷಣ ಕಂಟ್ರೋಲ್ ರೂಮ್ 112ಕ್ಕೆ ತಿಳಿಸಬೇಕೆಂದು ಸಾರ್ವಜನಿಕರಿಗೆ ನಗರ ಪೊಲೀಸ್ ಆಯುಕ್ತರು ಮನವಿಮಾಡಿದ್ದಾರೆ ಎಂದು ತಿಳಿಸಿದರು.

ಈಗಾಗಲೇ ಬಾರ್ ರೆಸ್ಟೋರೆಂಟ್‌ಗಳ ಮಾಲೀಕರ ಸಭೆ ನಡೆಸಿ ಅಹಿತಕರ ಘಟನೆ ನಡೆಯ ಅವಕಾಶ ನೀಡದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಪಬ್‌ಗಳು ಮತ್ತು ಪಾರ್ಟಿ ಸ್ಥಳಗಳಲ್ಲಿ ಭದ್ರತೆಗಾಗಿ ಪರಿಶೀಲನೆ ಮಾಡಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಅವಘಡಗಳನ್ನು ತಡೆಯಲು ಕಳೆದ ವರ್ಷದಂತೆ ಈ ವರ್ಷವೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತದೆ ಎಲ್ಲಾ ಪ್ರದೇಶಗಳಲ್ಲಿ ಪೊಲೀಸರು ಪರಿಶೀಲನೆ ನಡೆಸುತ್ತಿದ್ದು, ಸಿದ್ಧತೆಗಳ ಕುರಿತು ಮಾಹಿತಿ ನೀಡಲಿದ್ದಾರೆ ಎಂದರು.

ಹೊಸ ವರ್ಷದ ಸಂಭ್ರಮದಲ್ಲಿ ಜನರು ದೊಡ್ಡ ಸಂಖ್ಯೆಯಲ್ಲಿ ಸೇರುವುದರಿಂದ ಸುರಕ್ಷತೆ ಮುಖ್ಯ. ಅಹಿತಕರ ಘಟನೆಗಳು ಮತ್ತು ಗೊಂದಲಗಳನ್ನು ತಡೆಯಲು.

ಸಾರ್ವಜನಿಕರ ಸುರಕ್ಷತೆ ಮತ್ತು ಶಾಂತಿ ಕಾಪಾಡಲು ಪೊಲೀಸರು ಹೊಸ ವರ್ಷದ ಸಂಭ್ರಮ ಶಾಂತಿಯುತವಾಗಿ ನಡೆಯಲು ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ ಎಂದರು.

ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ–ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.
* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.
* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.
* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.
* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.
* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಕರ್ನಾಟಕ ಜಾಗತಿಕ ಟೆಕ್ ಸಮ್ಮೇಳನ–ಅಗ್ಗದ ಕಂಪ್ಯೂಟರ್




**ಕ**ರ್ನಾಟಕ ಸರ್ಕಾರದ ವತಿಯಿಂದ ಆಯೋಜಿಸಲಾದ 28ನೇ ಬೆಂಗಳೂರು ಟೆಕ್ ಸಮ್ಮಿಟ್ (BTS 2025) ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಯಶಸ್ವಿಯಾಗಿ ನಡೆಯಿತು. "ಫ್ಯೂಚರೈಸ್" ಎಂಬ ವಿಷಯದಡಿ ಭವಿಷ್ಯ ನಿರ್ದಿಷ್ಟ ತಂತ್ರಜ್ಞಾನಗಳ ಕುರಿತು ಸಮ್ಮಿಟ್ ಗಮನಹರಿಸಿತು.

ನವೆಂಬರ್ 18 ರಿಂದ 20 ರವರೆಗೆ ಮೂರು ದಿನಗಳಲ್ಲಿ ನಡೆದ ಈ ಸಮ್ಮಿಟ್‌ನಲ್ಲಿ ಕೃತಕ ಬುದ್ಧಿಮತ್ತೆ (AI), ಡೀಪ್ ಟೆಕ್, ಜೈವ ತಂತ್ರಜ್ಞಾನ, ಸೆಮಿಕಂಡಕ್ಟರ್, ಸ್ವಚ್ಛ ಇಂಧನ ಹಾಗೂ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಗಳ ಮೇಲೆ ಚರ್ಚೆಗಳು ನಡೆದವು. ಸ್ಟಾರ್ಟ್‌ಅಪ್ ಪ್ರದರ್ಶನಗಳು, ಹೂಡಿಕೆದಾರರ ಸಂಪರ್ಕ ಸಭೆಗಳು ಮತ್ತು ಹೊಸ ಹೂಡಿಕೆ ಘೋಷಣೆಗಳು ಪ್ರಮುಖ ಆಕರ್ಷಣೆಯಾಗಿದ್ದವು. ಕೃತಕ ಬುದ್ಧಿಮತ್ತೆ (AI), ಕ್ವಾಂಟಮ್ ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಡೀಪ್ ಟೆಕ್ ಸೇರಿದಂತೆ ಭವಿಷ್ಯದ ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳ ಮೇಲೆ ಸಮ್ಮಿಟ್ ಗಮನ ಕೇಂದ್ರೀಕರಿಸಿತು. ಈ ಸಮ್ಮಿಟ್ ಹೊಸ ಆವಿಷ್ಕಾರ, ಹೂಡಿಕೆ ಹಾಗೂ B2B ಒಪ್ಪಂದಗಳಿಗೆ ಜಾಗತಿಕ ವೇದಿಕೆಯಾಗುವ ಉದ್ದೇಶ ಹೊಂದಿತ್ತು.

ಕರ್ನಾಟಕದ ರೂ. 1.5 ಲಕ್ಷ ಕೋಟಿ ಮೂಲಸೌಕರ್ಯ ಹೂಡಿಕೆ, ಪ್ರಸ್ತಾವಿತ AI ಸಿಟಿ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಅನುಕೂಲಕರ ನೀತಿಗಳನ್ನು ಈ ಸಮ್ಮಿಟ್ ಪ್ರಮುಖವಾಗಿ ಪ್ರಸ್ತುತಪಡಿಸಿತು. 10,000ಕ್ಕೂ ಹೆಚ್ಚಿನ ಪ್ರತಿನಿಧಿಗಳು ಹಾಜರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ 600ಕ್ಕೂ ಹೆಚ್ಚು ಭಾಷಣಕಾರರು, ತಮ್ಮ ತಾಂತ್ರಿಕ ಪ್ರಸ್ತಾವನೆಗಳನ್ನು ಸಲ್ಲಿಸಿದರು. ಈ ಟೆಕ್ ಸಮ್ಮಿಟ್‌ನಲ್ಲಿ 1,200ಕ್ಕೂ ಅಧಿಕ ಪ್ರದರ್ಶಕರು ತಮ್ಮ ಉದ್ಯಮದ ತಾಂತ್ರಿಕ ಕೌಶಲ್ಯದ ಉತ್ಪನ್ನಗಳನ್ನು ಪ್ರದರ್ಶಿಸಿದರು. ಡಿಜಿ–ಹೆಲ್ತ್‌ನಿಂದ ಹಿಡಿದು ಮುಂದಿನ ತಲೆಮಾರಿನ ನೆಟ್‌ವರ್ಕ್‌ಗಳವರೆಗೂ ವಿವಿಧ ಕ್ಷೇತ್ರಗಳ ತಾಂತ್ರಿಕ ಪರಿಣಿತರ ಉತ್ಪನ್ನಗಳು ಒಳಗೊಂಡಿದ್ದವು.

ಸ್ಟಾರ್ಟ್‌ಅಪ್‌ಗಳನ್ನು ಖರೀದಿದಾರರು ಮತ್ತು ಹೂಡಿಕೆದಾರರೊಂದಿಗೆ ಸಂಪರ್ಕಿಸಿ, ಉನ್ನತ ಮೌಲ್ಯದ ಸಹಭಾಗಿತ್ವಗಳನ್ನು ರೂಪಿಸುವುದು ಈ ಸಮ್ಮಿಟ್‌ನ ಮುಖ್ಯ ಗುರಿಯಾಗಿತ್ತು.

ಇದೇ ಸಂದರ್ಭದಲ್ಲಿ ಕಂಪ್ಯೂಟರ್ ಕ್ಷೇತ್ರದಲ್ಲಿ ಸಂಚಲನ ಮೂಡಿಸಬಲ್ಲ ಎಐ ಶಕ್ತ ಕಿಯೋ ಎನ್ನುವ ಮೈಕ್ರೋಪಿಸಿಯನ್ನು ಕರ್ನಾಟಕ ಸರ್ಕಾರವು ಅಭಿವೃದ್ಧಿಪಡಿಸಿದ್ದು ಅನಾವರಣಗೊಳಿಸಲಾಯಿತು. ಅಗ್ಗದ ಬೆಲೆಗೆ ಸಿಗುವ ಈ ಕಿಯೋ ಕಂಪ್ಯೂಟರ್ ಬೆಂಗಳೂರು ಟೆಕ್ ಸಮಿಟ್ನ ಪ್ರಮುಖ ಆಕರ್ಷಣೆ ಎನಿಸಿದೆ. ಕರ್ನಾಟಕ ಸರ್ಕಾರದ ಐಟಿ ಇಲಾಖೆ ಹಾಗೂ ಕಿಯೋನಿಕ್ಸ್ ಸಂಸ್ಥೆ ಜಂಟಿಯಾಗಿ ಈ ಗಣಕಯಂತ್ರ ಅಭಿವೃದ್ಧಿಪಡಿಸಿದೆ.

ಕಿಯೋ (KEO) ಎಂಬುದು ಒಂದು ಸಣ್ಣ ಪರ್ಸನಲ್ ಕಂಪ್ಯೂಟರ್ ಅಥವಾ ಗಣಕಯಂತ್ರ. ಇದು ಜ್ಞಾನ ಆಧಾರಿತವಾದ, ಅಗ್ಗವಾಗಿರುವ ಮತ್ತು ಮುಕ್ತ ಕಂಪ್ಯೂಟಿಂಗ್ ಇರುವ ಕಂಪ್ಯೂಟರ್ (KEO- Knowledge based, Economical and Open computing). ದುಬಾರಿ ಬೆಲೆಯ ಕಂಪ್ಯೂಟರ್, ಲ್ಯಾಪ್‌ಟಾಪ್ ಖರೀದಿಸಲು ಶಕ್ತರಲ್ಲದ ಕೆಳ ಮಧ್ಯಮ ವರ್ಗದ ಜನರ ಕೈಗೆ ಕಡಿಮೆ ಬೆಲೆಗೆ ಪ್ರಬಲ ಕಂಪ್ಯೂಟರ್ ಒದಗಿಸುವ ಉದ್ದೇಶದಿಂದ ರೂಪಿಸಲಾದ ಗಣಕಯಂತ್ರ ಇದು.

ಇದು ಎಐ ಶಕ್ತ ಪಿಸಿಯಾಗಿದೆ. 4ಜಿ, ವೈಫೈ, ಇಂಟರ್‌ನೆಟ್, ಯುಎಸ್ಬಿಎ, ಯುಎಸ್ಬಿಸಿ ಪೋರ್ಟ್‌ಗಳು, ಎಚ್‌ಡಿಎಂಐ, ಆಡಿಯೋ ಜ್ಯಾಕ್‌ಗಳನ್ನು ಇದು ಹೊಂದಿದೆ. ಇಂಟರ್‌ನೆಟ್ ಇಲ್ಲದಿದ್ದರೂ ಕೆಲಸ ಮಾಡಬಲ್ಲಂತೆ ಎಐ ಅನ್ನು ಶಕ್ತಗೊಳಿಸಲಾಗಿದೆ. ಕಲಿಕೆ, ಪ್ರೋಗ್ರಾಮಿಂಗ್ ಮತ್ತು ಪ್ರೊಡಕ್ಟಿವಿಟಿ ಸಾಧನಗಳನ್ನು ಪ್ರೀ ಇನ್ಸ್ಟಾಲ್ ಮಾಡಲಾಗಿರುತ್ತದೆ. ಕಂಪ್ಯೂಟರ್‌ನಲ್ಲಿ ಮತ್ತೊಂದು ವಿಶೇಷತೆ ಎಂದರೆ ಬುದ್ಧ್ (BUDDH) ಎನ್ನುವ ಎಐ ಏಜೆಂಟ್. ಕರ್ನಾಟಕ ರಾಜ್ಯದ ಡಿಎಸ್ಇಆರ್‌ಟಿ ಸಿಲಾಬಸ್‌ನಲ್ಲಿ ಟ್ರೈನ್ ಆಗಿರುವ ಎಐ ಏಜೆಂಟ್ ಇದು. ಕಿಯೋ ಕಂಪ್ಯೂಟರ್‌ನಲ್ಲಿ ಈ ಎಐ ಏಜೆಂಟ್ ಪ್ರೀಲೋಡೆಡ್ ಆಗಿ ಬಂದಿರುತ್ತದೆ. ಇಂಟರ್‌ನೆಟ್ ಇಲ್ಲದೆಯೂ ಆಫ್‌ಲೈನ್‌ನಲ್ಲೇ ಈ ಎಐ ಏಜೆಂಟ್ ಆಧಾರಿತ ಕಂಪ್ಯೂಟರ್ ಕೆಲಸ ಮಾಡಬಲ್ಲುದು.

ಕರ್ನಾಟಕ ಸರ್ಕಾರದ ವತಿಯಿಂದ ಅಗ್ಗದ ಬೆಲೆಗೆ ಎಐ ಶಕ್ತ ಕಂಪ್ಯೂಟರ್‌ವೊಂದನ್ನು (AI ready computer) ಅಭಿವೃದ್ಧಿಪಡಿಸಲಾಗಿದೆ. ನವೆಂಬರ್ 18 ರಂದು ಚಾಲನೆಗೊಂಡ ಬೆಂಗಳೂರು ಟೆಕ್ ಸಮಿಟ್ 2025ನಲ್ಲಿ (Bengaluru Tech Summit–2025) ಈ ವಿಶೇಷ ಗಣಕಯಂತ್ರವನ್ನು ಅನಾವರಣಗೊಳಿಸಲಾಗಿದೆ.

ಕರ್ನಾಟಕ ಸರ್ಕಾರೀ ಸ್ವಾಮ್ಯದ ಕಿಯೋನಿಕ್ಸ್ ಸಂಸ್ಥೆ ಹಾಗೂ ಐಟಿ ಬಿಟಿ ಇಲಾಖೆ ಜಂಟಿಯಾಗಿ ಸೇರಿ ಈ ಪರ್ಸನಲ್ ಕಂಪ್ಯೂಟರ್ (Micro PC) ಅನ್ನು ಅಭಿವೃದ್ಧಿಪಡಿಸಿವೆ.

ಜಾಗತಿಕ ಮಟ್ಟದ ಭಾಗವಹಿಸುವಿಕೆ ಹಾಗೂ ಹೂಡಿಕೆ ಭರವಸೆಗಳೊಂದಿಗೆ, ಬೆಂಗಳೂರು ಟೆಕ್ ಸಮ್ಮಿಟ್ 2025 ಭಾರತದಲ್ಲಿನ ತಂತ್ರಜ್ಞಾನ ರಾಜಧಾನಿಯಾಗಿ ಬೆಂಗಳೂರಿನ ಸ್ಥಾನವನ್ನು ಮತ್ತಷ್ಟು ದೃಢಪಡಿಸಿದೆ.

ಈ 28ನೇ ಆವೃತ್ತಿಯ ಟೆಕ್ ಸಮಿಟ್ನಲ್ಲಿ ಈ ಕಿಯೋ ಕಂಪ್ಯೂಟರ್ (KEO computer) ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದ್ದು, ಇದು ಎಷ್ಟರ ಮಟ್ಟಿಗೆ ಯಶಸ್ಸು ಗಳಿಸಬಲ್ಲದು ಎಂದು ಕಾದು ನೋಡಬೇಕಿದೆ.



# ಈ ವರ್ಷದ ಕಹಿ ಘಟನೆಗಳು....



**ಅ**ಮೆರಿಕದ ನೂತನ ಅಧ್ಯಕ್ಷರು: ಈ ವರ್ಷದ ಜನವರಿ 2025ರಲ್ಲಿ ಪ್ರಾರಂಭವಾದ ನೂತನ ವರ್ಷದಲ್ಲಿ ಡೊನಾಲ್ಡ್ ಟ್ರಂಪ್ ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದರು. ಅವರು ಅಧಿಕಾರಕ್ಕೆ ಬಂದ ಕೂಡಲೇ ಅಕ್ರಮ ವಲಸಿಗರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಮತ್ತು ಎಲೋನ್ ಮಸ್ಕ್ ನೇತೃತ್ವದ 'ದಕ್ಷತಾ ಇಲಾಖೆ' (DOGE) ಸ್ಥಾಪನೆಯಂತಹ ಪ್ರಮುಖ ನಿರ್ಧಾರಗಳನ್ನು ಕೈಗೊಂಡರು.

ಕೆನಡಾದಲ್ಲಿ ಜಸ್ಟಿನ್ ಟ್ರುಡೋ ರಾಜೀನಾಮೆ ನಂತರ ಮಾರ್ಕ್ ಕಾರ್ನಿ ಪ್ರಧಾನಿಯಾದರು. ಜರ್ಮನಿಯಲ್ಲಿ ಫ್ರೆಡ್ರಿಕ್ ಮರ್ಜ್ ಹೊಸ ಚಾನ್ಸೆಲರ್ ಆಗಿ ಆಯ್ಕೆಯಾದರು. ಜಪಾನ್ ಮತ್ತು ನಮೀಬಿಯಾದಲ್ಲಿ ಈ ಎರಡೂ ದೇಶಗಳು ತಮ್ಮ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳಾ ಪ್ರಧಾನಿ/ಅಧ್ಯಕ್ಷರನ್ನು (ಸನಾ ಟಕೈಚಿ ಮತ್ತು ನೆಟುಂಬೊ ನಂದಿ–ಂದೈತ್ವಾಹ್) ಅಧಿಕಾರಕ್ಕೆ ತಂದವು.

ಏಪ್ರಿಲ್ 21, 2025 ರಂದು ಪೋಪ್ ಫ್ರಾನ್ಸಿಸ್ (88 ವರ್ಷ) ನಿಧನರಾದ ಪ್ರಯುಕ್ತ ಮೇ ತಿಂಗಳಲ್ಲಿ ಕಾರ್ಡಿನಲ್ ರಾಬರ್ಟ್ ಫ್ರಾನ್ಸಿಸ್ ಪ್ರೆವೋಸ್ಟ್ ಅವರು 'ಪೋಪ್ ಲಿಯೋ XIV' ಹೆಸರಿನಲ್ಲಿ ಹೊಸ ಪೋಪ್ ಆಗಿ ಧರ್ಮಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡರು. ಇವರು ಅಮೆರಿಕ ಮೂಲದ ಮೊದಲ ಪೋಪ್ ಆಗಿದ್ದಾರೆ.

ಅಕ್ಟೋಬರ್‌ನಲ್ಲಿ ಗಾಜಾದಲ್ಲಿ ನಡೆಯುತ್ತಿರುವ ಇಸ್ರಾಯಿಲ್ ಮತ್ತು ಪಾಲಿಸ್ತಿನ ಜನರ ನಡುವೆ ನಡೆಯುತ್ತಿರುವ ಭೀಕರ ಯುದ್ಧವನ್ನು ತಾತ್ಕಾಲಿಕವಾಗಿ ಕದನ ವಿರಾಮ ಘೋಷಿಸುವ ಮೂಲಕ ಸ್ಥಗಿತಗೊಳಿಸಲಾಯಿತು. ಆದರೆ, ಜೂನ್‌ನಲ್ಲಿ ಇಸ್ರೇಲ್ ಮತ್ತು ಇರಾನ್ ನಡುವೆ 12 ದಿನಗಳ ಕಾಲ ತೀವ್ರ ಯುದ್ಧ ಪ್ರಾರಂಭವಾಗಿ ಇದು ಪಾಲಿಸ್ತೇನದ 2000 ಜನರ ಸಾವು ಮತ್ತು 4 ಲಕ್ಷಗಳ ನಿರಾಶ್ರಿತರಾದಂತಹ ಧರ್ಮ ರಾಜಕೀಯ ಕಾರಣವಾಗಿ ಉಲ್ಬಣಗೊಂಡಿತು. ಆದರೆ ತೀವ್ರ ಯುದ್ಧ ವಿಮಾನಗಳ ಮತ್ತು ಯುದ್ಧ ಸ್ಥಾವರಗಳ ಧ್ವಂಸಗೊಂಡ ಪರಿಣಾಮವಾಗಿ ಅತಿ ಹೆಚ್ಚಿನ ನಾಗರಿಕ ಮತ್ತು ಮಿಲಿಟರಿ ಪ್ರದೇಶಗಳ ನಷ್ಟದಿಂದಾಗಿ ಕದನ ವಿರಾಮ ಘೋಷಿಸಲಾಯಿತು.

ಈ ನಡುವೆ ಭಾರತದ ಕಾಶ್ಮೀರ ರಾಜ್ಯದ ಪಹಲ್ಗಾಮ್ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 21 ಜನ ಭಾರತೀಯ ಪ್ರವಾಸಿಗರು ಉಗ್ರರ ಗುಂಡಿಗೆ ಬಲಿಯಾದರು. ಇದು ಏಪ್ರಿಲ್ ಕೊನೆ ವಾರ ಮತ್ತು ಮೇ ಮೊದಲ ವಾರದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಭೀತಿಯ ಉದ್ವಿಗ್ನತೆ ಹೆಚ್ಚಾಗಿ ಸ್ವಲ್ಪ ಮಟ್ಟಿಗೆ ಸಮರ ಯುದ್ಧವಿಮಾನಗಳ ದಾಳಿ ಮತ್ತು ಪಾಕಿಸ್ತಾನದಲ್ಲಿರುವ ಉಗ್ರರ ಹಡಗುತಾಣಗಳ ಧ್ವಂಸವಾಗುವುದರೊಂದಿಗೆ ಹೆಚ್ಚಿನ ಪ್ರಾಣನಷ್ಟವಾದೆ ಮುಕ್ತಾಯಗೊಂಡಿತು.

ಕೃತಕ ಬುದ್ಧಿಮತ್ತೆ (AI): ಆಗಸ್ಟ್‌ನಲ್ಲಿ OpenAI ಸಂಸ್ಥೆಯು GPT–5 ಅನ್ನು ಬಿಡುಗಡೆ ಮಾಡಿತು. ಅಮೆರಿಕವು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಪ್ರಾಬಲ್ಯ ಸಾಧಿಸಲು 'ಸ್ಟಾರ್ಗೇಟ್' ಎಂಬ ಬೃಹತ್ ಯೋಜನೆಯನ್ನು ಪ್ರಾರಂಭಿಸಿತು.

ಬಾಹ್ಯಾಕಾಶ ವಿಭಾಗದಲ್ಲಿ ಬ್ಲೂ ಒರಿಜಿನ್ ಕಂಪನಿಯ 'ನ್ಯೂ ಗ್ಲೆನ್' ರಾಕೆಟ್ ಯಶಸ್ವಿಯಾಗಿ ಉಡಾವಣೆಯಾಗುವ ಮೂಲಕ ಭಾರತೀಯ ಗಗನಯಾತ್ರಿಗಳು ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಮಿಷನ್‌ನಲ್ಲಿ ಶುಭಾಂಶು ಶುಕ್ಲರವರು ಯಶಸ್ವಿಯಾಗಿ ಭಾಗವಹಿಸಿ 100 ದಿನಗಳ ನಂತರ ಭೂಮಿಗೆ ಹಿಂದಿರುಗುವ ಮೂಲಕ ಭಾರತದ ಬಾಹ್ಯಾಕಾಶ ಜಗತ್ತಿನಲ್ಲಿ ಭಾರತೀಯರೊಬ್ಬರ ಅಪ್ರತಿಮ ಸಾಧನೆ ಈ ವರ್ಷದಲ್ಲೇ ಆಗಿರುತ್ತದೆ. ಮಾರ್ಚ್ 2025ರಲ್ಲಿ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ 5,000ಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು. ಮುಂದುವರೆದು ಜುಲೈನಲ್ಲಿ ರಷ್ಯಾದ ಕಮ್ಚಟ್ಕಾ ಪೆನಿನ್ಸುಲಾದಲ್ಲಿ 8.8 ತೀವ್ರತೆಯ ಭೂಕಂಪ ಸಂಭವಿಸಿ ಹಲವಾರು ಪ್ರಾಣನಷ್ಟ ಮತ್ತು ನಾಗರಿಕ ಸ್ಥಾವರಗಳ ಧ್ವಂಸವಾಗಿರುತ್ತದೆ. ನವೆಂಬರ್ ಡಿಸೆಂಬರ್ ತಿಂಗಳಿನಲ್ಲಿ ಶತಮಾನದ ಅತಿ ಭಯಂಕರ ಬಿರುಗಾಳಿ, ಅತಿವೃಷ್ಟಿ, ಚಂಡಮಾರುತದಿಂದ ಫಿಲಿಫೈನ್ಸ್, ಥೈಲಾಂಡ್, ಶ್ರೀಲಂಕಾ, ಸಿಂಗಾಪುರ್ ಮತ್ತು ದಕ್ಷಿಣ ಚೈನಾ ಭಾಗದಲ್ಲಿ 30 ಸಾವಿರಕ್ಕೂ ಹೆಚ್ಚು ಜನರ ಸಾವು–ನೋವು ಮತ್ತು ಒಂದು ಲಕ್ಷ ಜನರ ನಿರಾಶ್ರಿತರಾಗುವುದರೊಂದಿಗೆ ಅಪಾರ ಪ್ರಮಾಣದ ನಾಗರಿಕ ಸ್ಥಾವರಗಳು ಧ್ವಂಸವಾಗಿರುತ್ತವೆ.

ಸಾಹಿತ್ಯ, ರಾಜಕೀಯ, ಸಾಮಾಜಿಕ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹಲವು ಗಣ್ಯರು ಈ ವರ್ಷ ನಮ್ಮನ್ನಗಲಿದ್ದಾರೆ. ಪ್ರಮುಖರ ವಿವರ ಇಲ್ಲಿದೆ:

**ಪ್ರೀತಿಶ್ ನಂದಿ:** ಪತ್ರಕರ್ತ, ಕವಿ, ಚಿತ್ರ ನಿರ್ಮಾಪಕರಾಗಿದ್ದ ಪ್ರೀತಿಶ್ ನಂದಿ (73) ಅವರು ಜನವರಿ 8ರಂದು ನಿಧನರಾದರು.

**ವಿಜಯ್ ರೂಪಾನಿ:** ಬಿಜೆಪಿ ಮುಖಂಡ, ಗುಜರಾತ್ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ(68) ಅವರು ಜೂನ್ 12ರಂದು ಏರ್ ಇಂಡಿಯಾ ವಿಮಾನ ದುರಂತದಲ್ಲಿ ಕೊನೆಯುಸಿರೆಳೆದರು.

**ವಿ.ಎಸ್.ಅಚ್ಯುತಾನಂದನ್:** ಕೇರಳದ ಮಾಜಿ ಮುಖ್ಯಮಂತ್ರಿ, ಸಿಪಿಎಂನ ಹಿರಿಯ ನಾಯಕ ವಿ.ಎಸ್. ಅಚ್ಯುತಾನಂದನ್ (101 ವರ್ಷ). ಅವರು ಜುಲೈ 21ರಂದು ನಿಧನರಾದರು.

**ಶಿಬು ಸೊರೇನ್:** ಜಾರ್ಖಂಡ್ ಮಾಜಿ ಮುಖ್ಯಮಂತ್ರಿ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ರಾಜಕೀಯ ಪಕ್ಷದ ಸಂಸ್ಥಾಪಕ ಶಿಬು ಸೊರೇನ್ (81) ಅವರು ಆಗಸ್ಟ್ 4ರಂದು ನಿಧನ ಹೊಂದಿದರು.

**ಸತ್ಯಪಾಲ್ ಮಲಿಕ್:** ಜಮ್ಮು ಮತ್ತು ಕಾಶ್ಮೀರ, ಗೋವಾ ಮತ್ತು ಮೇಘಾಲಯದ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್ (79) ಆಗಸ್ಟ್ 5ರಂದು ನಿಧನ ಹೊಂದಿದರು.

**ಫ್ರಾಂಕ್ ಕೆಪ್ರಿಯೋ:** ಅಮೆರಿಕದ ರೋಡ್ ಐಲೆಂಡ್ನ ಮುನ್ಸಿಪಲ್ ಕೋರ್ಟ್ ಮುಖ್ಯ ನ್ಯಾಯಾಧೀಶ ಫ್ರಾಂಕ್ ಕ್ಯಾಪ್ರಿಯೊ (80) ಅವರು ಆಗಸ್ಟ್ 20ರಂದು ನಿಧನರಾದರು.

**ಜುಬೀನ್ ಗರ್ಗ್:** ಅಸ್ಸಾಮಿ ಖ್ಯಾತ ಗಾಯಕ ಜುಬೀನ್ ಗರ್ಗ್ (52) ಸೆಪ್ಟೆಂಬರ್ 19ರಂದು ಮೃತಪಟ್ಟರು. ಕಾರ್ಯಕ್ರಮವೊಂದರ ನಿಮಿತ್ತ ಸಿಂಗಪುರಕ್ಕೆ ತೆರಳಿದ್ದ ಅವರು ಈಜಲು ತೆರಳಿದ್ದ ವೇಳೆ ಅನುಮಾನಾಸ್ಪದವಾಗಿ ಸಾವೀಗೀಡಾದರು.



**ಮನೋಜ್ ಕುಮಾರ್:** ಬಾಲಿವುಡ್‌ನ ಖ್ಯಾತ ನಟ, ನಿರ್ಮಾಪಕರಾಗಿದ್ದ ಮನೋಜ್ ಕುಮಾರ್ (87) ಅವರು ಹೃದಯಸಂಬಂಧಿ ಕಾಯಿಲೆಯಿಂದಾಗಿ ಏಪ್ರಿಲ್ 4 ರಂದು ಮುಂಬೈನಲ್ಲಿ ನಿಧನರಾದರು.

**ಪೋಪ್ ಫ್ರಾನ್ಸಿಸ್:** ಪೋಪ್ ಹುದ್ದೆಗೇರಿದ ಲ್ಯಾಟಿನ್ ಅಮೆರಿಕದ ಮೊದಲ ಧರ್ಮಗುರು ಎಂಬ ಖ್ಯಾತಿಗೆ ಪಾತ್ರರಾಗಿದ್ದ ಪೋಪ್ ಫ್ರಾನ್ಸಿಸ್ (88) ಅವರು ಏಪ್ರಿಲ್ 21ರಂದು ಕೊನೆಯುಸಿರೆಳೆದರು.

**ಕೆ.ಕಸ್ತೂರಿ ರಂಗನ್:** ಇಸ್ರೊ ಮಾಜಿ ಅಧ್ಯಕ್ಷ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ(ಎನ್ಇಪಿ) ಕರಡು ಸಮಿತಿ ಅಧ್ಯಕ್ಷರಾಗಿದ್ದ ಕೃಷ್ಣಸ್ವಾಮಿ ಕಸ್ತೂರಿರಂಗನ್ (84) ಅವರು ಏಪ್ರಿಲ್ 25ರಂದು ಕೊನೆಯುಸಿರೆಳೆದರು.

**ಎಂ.ಆರ್ ಶ್ರೀನಿವಾಸನ್:** ದೇಶದ ಅಣು ಶಕ್ತಿ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಎಂ.ಆರ್ ಶ್ರೀನಿವಾಸನ್ (95) ಅವರು ಮೇ 20ರಂದು ನಿಧನರಾದರು.

**ವಾಲ್ಮೀಕ್ ಥಾಪರ್:** ದೇಶದ ವನ್ಯಜೀವಿ ಸಂರಕ್ಷಕರಲ್ಲಿ ಪ್ರಮುಖರಾಗಿದ್ದ ವಾಲ್ಮೀಕ್ ಥಾಪರ್(73) ಅವರು ಮೇ 31ರಂದು ಕೊನೆಯುಸಿರೆಳೆದರು.

**ಪೀಯೂಷ್ ಪಾಂಡೆ:** ದೇಶದ ಜಾಹೀರಾತು ಲೋಕಕ್ಕೆ ವಿಶೇಷ ಮೆರುಗು ತುಂಬಿದ್ದ ಪದ್ಮಶ್ರೀ ಪುರಸ್ಕೃತ ಪೀಯೂಷ್ ಪಾಂಡೆ (70) ಅವರು ಅಕ್ಟೋಬರ್ 24ರಂದು ನಿಧನ ಹೊಂದಿದರು.

**ಧರ್ಮೇಂದ್ರ:** ಹಿಂದಿ ಚಿತ್ರರಂಗದ ಸ್ಫುರದ್ರೂಪಿ ನಟ ಧರ್ಮೇಂದ್ರ ಅವರು ನವೆಂಬರ್ 24ರಂದು ತಮ್ಮ 89ನೇ ವಯಸ್ಸಿನಲ್ಲಿ ನಿಧನರಾದರು.

**ಶಿವರಾಜ್ ಪಾಟೀಲ್:** ಕೇಂದ್ರ ಸರ್ಕಾರದ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಶಿವರಾಜ್ ಪಾಟೀಲ್ (90) ಅವರು ಡಿಸೆಂಬರ್ 12ರಂದು ನಿಧನ ಹೊಂದಿದರು.

**ಶಾಮನೂರು ಶಿವಶಂಕರಪ್ಪ:** ಡಿಸೆಂಬರ್ 14, 2025ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

ಪ್ರಖ್ಯಾತ ಎಡಗೈ ಸ್ಪಿನ್ನರ್ ದಿಲೀಪ್ ಜೋಶಿಯವರು ಜೂನ್ 24 ರಂದು ನಿಧನರಾದರು.



# ಕರ್ನಾಟಕ ವಿಧಾನಸಭೆ: ಬೆಳಗಾವಿ ಅಧಿವೇಶನ ಸಿಎಂ ಬದಲಾವಣೆ ಚರ್ಚೆ



ಡಿಸೆಂಬರ್ 2025ರಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ಕರ್ನಾಟಕ ವಿಧಾನಸಭೆಯ ಚಳಿಗಾಲದ ಅಧಿವೇಶನವು ಸುಮಾರು ಹತ್ತು ದಿನಗಳ ಕಾಲ ನಡೆದು, ಈ ಅಧಿವೇಶನದಲ್ಲಿ ಸರ್ಕಾರ ಹಲವು ಮಹತ್ವದ ಮಸೂದೆಗಳು ಹಾಗೂ ತಿದ್ದುಪಡಿಗಳನ್ನು ಮಂಡಿಸಿ ಚರ್ಚೆ ನಡೆಸಲಾಯಿತು. ಮುಖ್ಯವಾಗಿ ಸಾಮಾಜಿಕ ಬಹಿಷ್ಕಾರ ನಿಷೇಧ, ದ್ವೇಷ ಭಾಷಣ ನಿಯಂತ್ರಣ ಸೇರಿದಂತೆ ಆಡಳಿತಾತ್ಮಕ ಮತ್ತು ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದ ವಿಷಯಗಳು ಚರ್ಚೆಯ ಕೇಂದ್ರಬಿಂದುವಾಗಿದ್ದವು. ಅಧಿವೇಶನದ ವೇಳೆ ಉತ್ತರ ಕರ್ನಾಟಕದ ಅಭಿವೃದ್ಧಿ, ಮೂಲಸೌಕರ್ಯ, ನೀರಾವರಿ ಮತ್ತು ಪ್ರಾದೇಶಿಕ ಬೇಡಿಕೆಗಳ ಬಗ್ಗೆ ಸದಸ್ಯರು ಸರ್ಕಾರದ ಗಮನ ಸೆಳೆದರು. ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ಮಧ್ಯೆ ತೀವ್ರ ಚರ್ಚೆಗಳು ನಡೆದರೂ, ಕೆಲ ಬಾಕಿ ಬೇಡಿಕೆಗಳು ಇನ್ನೂ ಪರಿಹಾರ ಕಾಣಲಿಲ್ಲ. ಈ ಅಧಿವೇಶನದಲ್ಲಿ ಎರಡೂ ಸದನದಲ್ಲಿ ರಾಜ್ಯ ಸರ್ಕಾರವು ಚರ್ಚೆಯಿಲ್ಲದೆ ಮತ್ತು ಮತಕ್ಕೆ ಹಾಕದೆ ಎರಡೂ ಸದನಗಳಲ್ಲಿ 7 ಮಸೂದೆಗಳಿಗೆ ಅನುಮೋದನೆ ಪಡೆದಿರುತ್ತದೆ.

1) ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಮಸೂದೆ–2025.

2) ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ಮಸೂದೆ–2025.

3) ಕರ್ನಾಟಕ ಧನವಿನಿಯೋಗ (ಸಂಖ್ಯೆ:04) ಮಸೂದೆ–2025

4) ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ಮಸೂದೆ–2025

5) ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) –2025

6) ಔಷಧ ಮತ್ತು ಪ್ರಸಾಧನ ಸಾಮಗ್ರಿ (ಕರ್ನಾಟಕ ತಿದ್ದುಪಡಿ) ಮಸೂದೆ–2025

7) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ–2025

ಇದೇ ಅವಧಿಯಲ್ಲಿ ಬಹುಮುಖ್ಯವಾಗಿ ಚರ್ಚಿತವಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನದಲ್ಲಿ ಮುಂದುವರಿಯುವವರೇ ಎಂಬ ಬಗ್ಗೆ ಕರ್ನಾಟಕ ರಾಜಕೀಯ ವಲಯದಲ್ಲಿ ಚರ್ಚೆ ಮುಂದುವರಿದಿದೆ. ಕಳೆದ ಹಲವಾರು ತಿಂಗಳುಗಳಿಂದ ವಿವಾದಕ್ಕೆ ಒಳಗಾದ ಸರ್ಕಾರದ ಮುಖ್ಯಮಂತ್ರಿ ಸ್ಥಾನದ ಪಟ್ಟದ ಆಟ ಬೆಳಗಾವಿ ವಿಧಾನಸಭೆಯ ಅಧಿವೇಶನದ ಒಳಗೂ–ಹೊರಗೂ, ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಸರ್ಕಾರವನ್ನು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಸಲು ಮತ್ತು ಜಟಾಪಟಿಗೆ ಕಾರಣವಾಯಿತು. ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾವು ಪೂರ್ಣ ಐದು ವರ್ಷಗಳ ಅವಧಿಗೆ ಮುಖ್ಯಮಂತ್ರಿ ಆಗಿ ಮುಂದುವರಿಯುವ ವಿಶ್ವಾಸ ವ್ಯಕ್ತಪಡಿಸಿ, ಸದನದಲ್ಲೂ ಇದನ್ನು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಪಕ್ಷದ ಒಳಗಿನ ನಾಯಕತ್ವ ಚರ್ಚೆಗಳು ವಿಧಾನಸಭೆಯ ಒಳಗೂ–ಹೊರಗೂ ಈ ಅನಿಶ್ಚಿತತೆಯನ್ನು ಮತ್ತು ಸರ್ಕಾರದ ಅಧಿಕಾರಿಗಳ ಡೋಲಾಯಮಾನ ಪರಿಸ್ಥಿತಿಯನ್ನು ಮಾಧ್ಯಮಗಳು ಸಹ ಜೀವಂತವಾಗಿರಿಸಿವೆ. ವಿಶೇಷವಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬೆಂಬಲಿಗರಿಂದ ನಾಯಕತ್ವ ಬದಲಾವಣೆ ಕುರಿತು ಅಸ್ಪಷ್ಟ ಮಾತುಗಳು ಕೇಳಿಬರುತ್ತಿದ್ದು, ಇದು ಪಕ್ಷದ ಒಳರಾಜಕೀಯಕ್ಕೆ ಕಾರಣವಾಗುತ್ತಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, "ಹೈಕಮಾಂಡ್ ಸೂಚನೆಯಂತೆ ಸರ್ಕಾರ ನಡೆಯುತ್ತದೆ" ಎಂದು ಸ್ಪಷ್ಟಪಡಿಸಿ, ನಾಯಕತ್ವ ಬದಲಾವಣೆಯ ಊಹಾಪೋಹಗಳನ್ನು ತಳ್ಳಿ ಹಾಕುತ್ತಿದ್ದಾರೆ. ಈ ವಿಷಯದಲ್ಲಿ ಅಂತಿಮ ನಿರ್ಧಾರ ಕಾಂಗ್ರೆಸ್ ಹೈಕಮಾಂಡ್ ಕೈಯಲ್ಲಿದ್ದು, ಸಾರ್ವಜನಿಕವಾಗಿ ಯಾವುದೇ ಅಧಿಕೃತ ಘೋಷಣೆ ಆಗದಿರುವುದರಿಂದ, 2026 ರಲ್ಲಿಯೂ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ ಮುಂದುವರಿಯುವ ವಿಚಾರ ರಾಜಕೀಯವಾಗಿ ಬಹು ಚರ್ಚಿತವಾಗುತ್ತಿದ್ದು ಎಲ್ಲಾ ಮಾಧ್ಯಮಗಳಲ್ಲೂ ಮತ್ತು ಸಾಮಾನ್ಯ ಜನರಲ್ಲೂ ಮುಂದಿನ ರಾಜಕೀಯ ತಿರುವಿನ ಬಗ್ಗೆ ಕುತೂಹಲಕ್ಕೆ ಕಾರಣವಾಗಿದೆ. ಈ ಎಲ್ಲಾ ಊಹಾಪೋಹಗಳ ಮತ್ತು ಗಾಳಿ ಸುದ್ದಿಗಳಿಗೆ ಸಂಕ್ರಾಂತಿಯ ನಂತರ ತೆರೆ ಬೀಳುವುದೇ ಎಂದು ಕಾದುನೋಡಬೇಕಾಗಿದೆ.

# ಭದ್ರತೆ ವಿಷಯದಲ್ಲಿ ರಾಜಿ ಇಲ್ಲ: ಜಗತ್ತಿಗೆ ಮೋದಿ ಸಂದೇಶ ರವಾನೆ



ನವದೆಹಲಿ: ಆಪರೇಷನ್ ಸಿಂಧೂರ್ ದೇಶದ ಭದ್ರತೆಗೆ ಬದ್ಧತೆಯ ಪ್ರದರ್ಶನವಾಗಿತ್ತು. ಪಾಕಿಸ್ತಾನದ ದುಸ್ಸಾಹಸದ ವಿರುದ್ಧದ ಕಾರ್ಯಾಚರಣೆ ನಡೆಸುವ ಮೂಲಕ ಭಾರತ, ಭದ್ರತೆಯ ವಿಷಯದಲ್ಲಿ ರಾಜಿ ಮಾಡಿ ಕೊಳ್ಳುವುದಿಲ್ಲ ಎಂಬ ಸಂದೇಶವನ್ನು ಜಗತ್ತಿಗೆ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಇದರ ಜೊತೆಗೆ ವಿಜ್ಞಾನ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆಗಳನ್ನು ಮುಕ್ತಕಂಠದಿಂದ ಪ್ರಶಂಶಿಸಿದ್ದು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದ ಮೊದಲ ಭಾರತೀಯ ಶುಭಾಂಶು ಶುಕ್ಲಾ ಸಾಧನೆ ಕೊಂಡಾಡಿ ಶ್ಲಾಘಿಸಿದ್ದಾರೆ.

2025ರ ವರ್ಷದ ಕೊನೆಯ ಮನದ ಮಾತಿನಲ್ಲಿ ಇಡೀ ವರ್ಷ ಆದ ಕೆಲವು ಪ್ರಮುಖ ಘಟನೆಗಳು ಸೇರಿದಂತೆ ಹೆಮ್ಮೆ ಪಡುವ ಹಲವು ಕ್ಷಣಗಳು ಘಟನೆಗಳನ್ನು ನೆನಪು ಮಾಡಿಕೊಂಡಿದ್ದಾರೆ.

ಆಕಾಶವಾಣಿಯ ಮನದ ಮಾತಿನ 129ನೇ ಸಂಚಿಕೆಯಲ್ಲಿ ದೇಶವಾಸಿಗಳನ್ನುದ್ದೇಶಿಸಿ ಮಾತನಾಡಿದ ಅವರು ಆಪರೇಷನ್ ಸಿಂಧೂರ್ ಸಮಯದಲ್ಲಿ ಭಾರತ ಒಗ್ಗಟ್ಟು ಪ್ರದರ್ಶಿಸಿತ್ತು. ಭಯೋತ್ಪಾದಕರು ಭಾರತದ ತಂಟೆಗೆ ಬಂದರೆ ಹುಡುಕಿಕೊಂಡು ಹೋಗಿ ಸದೆಬಡಿಯುತ್ತೇವೆ ಎನ್ನುವುದನ್ನು ನಿರೂಪಿಸಿದ ಕ್ಷಣ ಎಂದಿದ್ದಾರೆ.

"ಈ ವರ್ಷ, 'ಆಪರೇಷನ್ ಸಿಂಧೂರ್' ಪ್ರತಿಯೊಬ್ಬ ಭಾರತೀಯನ ಹೆಮ್ಮೆಯ ಸಂಕೇತವಾಯಿತು. ಇಂದಿನ ಭಾರತ ತನ್ನ ಭದ್ರತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಜಗತ್ತು ಸ್ಪಷ್ಟವಾಗಿ ನೋಡಿದ ಆಪರೇಷನ್ ಸಿಂಧೂರ್' ಸಮಯದಲ್ಲಿ, ವಿಶ್ವದ ಮೂಲೆ ಮೂಲೆಗಳಿಂದ ಭಾರತ ಮಾತೆಯ ಮೇಲಿನ ಪ್ರೀತಿ ಮತ್ತು ಭಕ್ತಿಯ ಚಿತ್ರಗಳು ಹೊರಹೊಮ್ಮಿತ್ತು ಎಂದು ತಿಳಿಸಿದ್ದಾರೆ.

'ವಂದೇ ಮಾತರಂ' 150 ವರ್ಷಗಳನ್ನು ಪೂರೈಸಿದಾಗಲೂ ಇದೇ ಮನೋಭಾವ ಕಂಡುಬಂದಿತು ಎಂದು ಅವರು ಹೇಳಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ಮತ್ತು ವಿಶ್ವಕಪ್ ನಲ್ಲಿ ಜಯಗಳಿಸಿದ ಭಾರತದ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳನ್ನು ಪ್ರಧಾನಿ ಮೋದಿ ಶ್ಲಾಘಿಸಿದ್ದು ಈ ಸಾಧನೆಗಳನ್ನು 2025ರ ಪ್ರಮುಖ ಸಾಧನೆಗಳು ಎಂದು ತಿಳಿಸಿದ್ದಾರೆ. "2025 ಕ್ರೀಡೆಗಳ ದೃಷ್ಟಿಯಿಂದಲೂ ಸ್ಮರಣೀಯ ವರ್ಷವಾಗಿತ್ತು.

ಪುರುಷರ ಕ್ರಿಕೆಟ್ ತಂಡ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದಿತು. ಮಹಿಳಾ ಕ್ರಿಕೆಟ್ ತಂಡ ಮೊದಲ ಬಾರಿಗೆ ವಿಶ್ವಕಪ್ ಗೆದ್ದಿತು."

ಭಾರತದ ಹೆಣ್ಣುಮಕ್ಕಳು ಮಹಿಳಾ ಅಂಧರ ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ ಎಂದು ಬಣ್ಣಿಸಿದರು.

ವಿಶ್ವ ಚಾಂಪಿಯನ್‌ಶಿಪ್‌ಗಳಲ್ಲಿ ಹಲವಾರು ಪದಕಗಳನ್ನು ಗೆಲ್ಲುವ ಮೂಲಕ, ಪ್ಯಾರಾ–ಅಥ್ಲೀಟ್‌ಗಳು ಯಾವುದೇ ಅಡೆತಡೆಗಳು ದೃಢ ಸಂಕಲ್ಪವನ್ನು ತಡೆಯಲು ಸಾಧ್ಯವಿಲ್ಲ ಎಂದು ಸಾಬೀತುಪಡಿಸಿದರು ಎಂದು ನೆನಪಿಸಿಕೊಂಡಿದ್ದಾರೆ.

# ಒಂದು ಕಪ್ ಮೊಸರೂ, ಅಪ್ಪನ ಬಿಸಿ ಉಸಿರು



**ಬೆಂ**ಗಳೂರಿನ ಯಶವಂತಪುರದಿಂದ ಹಾಸನಕ್ಕೆ ಅಥವಾ ತುಮಕೂರಿಗೆ ಹೋಗುವ ದಾರಿಯಲ್ಲೇ ಗೊರಗುಂಟೆಪಾಳ್ಯವಿದೆ. ಅಲ್ಲಿಂದ ಹೆಬ್ಬಾಳಕ್ಕೆ ಹೋಗುವ ರಸ್ತೆಯಲ್ಲಿ ಅರ್ಧ ಕಿಲೋ ಮೀಟರ್ ಹೋದರೆ, ಸ್ಟ್ಯಾಂಡರ್ಡ್ ಎಲೆಕ್ಟ್ರಾನಿಕ್ಸ್ ವರ್ಕ್ಸ್ ಫ್ಯಾಕ್ಟರಿ ಸಿಗುತ್ತದೆ. ಹೆಚ್ಚಿನ ಸದ್ದಾಗದಂತೆ ಕಾರ್ಯ ನಿರ್ವಹಿಸುವ ವಿದೇಶಿ ನಿರ್ಮಿತ ಯಂತ್ರಗಳು ಅಲ್ಲಿವೆ. ಫ್ಯಾನ್, ರೆಫ್ರಿಜರೇಟರ್, ಟಿ.ವಿಗಳಿಗೆ ಅಗತ್ಯವಾಗಿ ಬೇಕಾಗುವ ಬಿಡಿಭಾಗಗಳನ್ನು ಅಲ್ಲಿ ಉತ್ಪಾದಿಸಲಾಗುತ್ತದೆ. ಎಲ್ಲಾ ಪ್ರಮುಖ ಕಂಪನಿಗಳಿಗೂ ಬಿಡಿ ಭಾಗಗಳನ್ನು ಸಪ್ಲೈ ಮಾಡುತ್ತಿರುವುದರಿಂದ ಸ್ಟ್ಯಾಂಡರ್ಡ್ ಎಲೆಕ್ಟ್ರಾನಿಕ್ಸ್ ಫ್ಯಾಕ್ಟರಿಗೆ ಒಳ್ಳೆಯ ಹೆಸರೂ ಇದೆ.

ಈ ಫ್ಯಾಕ್ಟರಿ ಮಾಲೀಕನೇ ರಂಗಸ್ವಾಮಿ. ಈತ, ಅರಸೀಕೆರೆ ಸಮೀಪದ ಹಳ್ಳಿಯವನು. ಸಿದ್ದಗಂಗಾ ಮಠದಲ್ಲಿ ಹೈಸ್ಕೂಲು, ತುಮಕೂರಿನಲ್ಲಿ ಐಟಿಐ ಓದಿದವನು ಸೀದಾ ಬಂದಿದ್ದು ಪೀಣ್ಯಕ್ಕೆ. ಹೆಲ್ಪರ್ ಆಗಿ ಒಂದು ಫ್ಯಾಕ್ಟರಿ ಸೇರಿಕೊಂಡವನು ಐದು ವರ್ಷದಲ್ಲಿ ಎಲ್ಲ ಬಗೆಯ ಕೆಲಸ ಕಲಿತ. ನಂತರ ಮಾರ್ಕೆಟಿಂಗ್ ಮ್ಯಾನೇಜರ್ ಆದ. ಮಾರಾಟಕ್ಕೆ ಸಂಬಂಧಿಸಿದ ಆಳ-ಅಗಲಗಳು ರಂಗಸ್ವಾಮಿಗೆ ಪರಿಚಯವಾದದ್ದೇ ಆಗ. ಹತ್ತಾರು ಕಂಪನಿಗಳ ಮುಖ್ಯಸ್ಥರ ಒಡನಾಟ, ವಿಶ್ವಾಸ, ಅಲ್ಲಿನ ವಹಿವಾಟುಗಳಿಗೆ ಇರುವ ಬೇಡಿಕೆಯನ್ನು ಗಮನಿಸಿದ ನಂತರ, ಹೇಗಿದ್ರೂ ಎಲ್ಲ ಕೆಲಸದ ಬಗ್ಗೆ ಗೊತ್ತಿದೆ. ಒಂದೆರಡು ಕಂಪನಿಗಳಿಂದ ಕಾಂಟ್ರಾಕ್ಟ್ ತಗೊಂಡು ಸ್ಪೇರ್ ಪಾರ್ಟ್ಸ್ ಉತ್ಪಾದನೆಯ ಸ್ವಂತ ಫ್ಯಾಕ್ಟರಿ ಶುರು ಮಾಡಿದ್ರೆ ಹೇಗೆ ಎಂಬ ಯೋಚನೆಯೂ ಅವನಿಗೆ ಬಂತು.

ರಂಗಸ್ವಾಮಿ ತಡಮಾಡಲಿಲ್ಲ. ಒಂದು ಪುಟ್ಟ ಶೆಡ್‌ನಲ್ಲಿ ಫ್ಯಾಕ್ಟರಿಯನ್ನು ಆರಂಭಿಸಿಯೇಬಿಟ್ಟ. ಯೌವನದ ಹುಮ್ಮಸ್ಸು ಹಾಗೂ ಗೆಲ್ಲಬೇಕೆಂಬ ಹಠದಿಂದ ಹಗಲಿರುಳೂ ದುಡಿದ. ಪರಿಣಾಮ, ಕೆಲವೇ ದಿನಗಳಲ್ಲಿ ರಂಗಸ್ವಾಮಿಯ ಬ್ಯಾಂಕ್ ಬ್ಯಾಲೆನ್ಸ್ ದುಪ್ಪಟ್ಟಾಯಿತು. ಅದುವರೆಗೂ ಸೆಕೆಂಡ್ ಹ್ಯಾಂಡ್ ಹೀರೋ ಹೋಂಡಾದಲ್ಲಿ ಓಡಾಡುತ್ತಿದ್ದವನು, ಒಟ್ಟಿಗೇ ಎರಡು ಕಾರ್ ಖರೀದಿಸುವಷ್ಟು ಶ್ರೀಮಂತನಾದ. 25 ಮಂದಿಗೆ ಕೆಲಸ ಕೊಟ್ಟ. ಫ್ಯಾಕ್ಟರಿಗೆ ಸ್ವಂತ ಬಿಲ್ಡಿಂಗ್ ಕಟ್ಟಿಸಿದ. ವಾಸಕ್ಕೆ, ಯಶವಂತ ಪುರದಲ್ಲೇ ಒಂದು ಮನೆ ಖರೀದಿಸಿದ. ಇಷ್ಟೆಲ್ಲ ಆದಮೇಲೆ, ರಂಗಸ್ವಾಮಿಯ ಯಶೋ ಗಾಥೆ ನೂರಾರು ಮಂದಿಯನ್ನು ತಲುಪಿತು. ಹೇಗಿದ್ದವನು ಹೇಗಾಗಿಬಿಟ್ಟ ಅಲ್ವ ಎಂದು ಎಲ್ಲರೂ ಬೆರಗಾಗುವ ವೇಳೆಗೇ, ಹಳೇ ಪರಿಚಯದ ಹುಡುಗಿಯೊಂದಿಗೆ ಮದುವೆಯಾದ ರಂಗಸ್ವಾಮಿ, ವರ್ಷದ ನಂತರ ಗಂಡು ಮಗುವಿನ ತಂದೆಯೂ ಆದ.

ಕೈ ತುಂಬಾ ವರಮಾನ ಕೊಡುವ ಕೆಲಸ, ಮನ ಮೆಚ್ಚಿದ ಹೆಂಡತಿ, ಖುಷಿ ಹೆಚ್ಚಿಸುವ ಮಗ, ಸಮಾಜದಲ್ಲಿ ವಿಶೇಷ ಸ್ಥಾನಮಾನ, ಯಾರಿಗೂ ಸಾಲ ಕೊಡಬೇಕಿಲ್ಲ ಎಂಬ ನಿರಾಳ ಭಾವ... ಲೈಫ್ ಈಸ್ ಬ್ಯೂಟಿಫುಲ್ ಎನ್ನಲು ಇಷ್ಟು ಸಾಕಲ್ಲವೇ? ರಂಗಸ್ವಾಮಿಯೂ ಇಂಥದೇ ಸಂಭ್ರಮದಲ್ಲಿದ್ದ. ಆಗಲೇ, ಯಾರೂ ನಿರೀಕ್ಷಿಸದ ಆಘಾತವೊಂದು ಅವನನ್ನು ಅಪ್ಪಳಿಸಿತು. ಅದೊಂದು ದಿನ ಮಾರ್ಕೆಟ್‌ಗೆ ಹೋಗಿ ವಾಪಸಾಗುತ್ತಿದ್ದ ರಂಗಸ್ವಾಮಿಯ ಪತ್ನಿಗೆ ವೇಗವಾಗಿ ಬಂದ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ...

'ಈಗಾಗ್ಲೇ ನನಗೂ ನಲವತ್ತೈದು ತುಂಬಿದೆ. ಮಗ 7ನೇ ಕ್ಲಾಸ್‌ಗೆ ಬಂದಿದಾನೆ. ಹೀಗಿರುವಾಗ ಇನ್ನೊಂದು ಮದುವೆಯಾಗಿ ಸಾಧಿಸೋದೇನಿದೆ? ಸೆಕೆಂಡ್ ಮ್ಯಾರೇಜ್ ಮಾಡ್ಕೊಂಡೆ ಅಂತಿಟ್ಕೊಳ್ಳಿ, ಹೊಸದಾಗಿ ಬಂದ ಹೆಂಡತಿ ನನ್ನ ಮಗನನ್ನು ತಿರಸ್ಕಾರದಿಂದ ನೋಡಿಬಿಟ್ರೆ, ಅಥವಾ ಹೆಂಡತಿಯ ಮೇಲಿನ ಮೋಹದಿಂದ ನಾನೇ ವಿಲನ್ ಥರಾ ವರ್ತಿಸಿಬಿಟ್ರೆ? ಬೇಡ ಬೇಡ. ಇಂಥ ಸಂದರ್ಭ ಗಳು ಜೊತೆಯಾಗೋದೇ ಬೇಡ. ನನಗಿನ್ನು ಮಗನೇ ಸರ್ವಸ್ವ. ಹೆಂಡತಿಯ ನೆನಪನ್ನು ಜೊತೆಗಿಟ್ಟುಕೊಂಡೇ ಇವನನ್ನು ಚೆನ್ನಾಗಿ ಓದಿಸ್ತೇನೆ...'. ಎರಡನೇ ಮದುವೆ ಮಾಡಿಕೊಳ್ಳಪ್ಪಾ ಎಂದು ಒತ್ತಾಯಿಸಲು ಬಂದ ಬಂಧುಗಳು ಹಾಗೂ ಹಿತೈಷಿಗಳಿಗೆ ರಂಗಸ್ವಾಮಿ ಹೇಳಿದ ಖಡಕ್ ಮಾತುಗಳಿವು.

ರಂಗಸ್ವಾಮಿ ಮಾತಿಗೆ ತಪ್ಪಲಿಲ್ಲ. ಅವನು ಮಗನನ್ನು ಕಣ್ರೆಪ್ಪೆಯಷ್ಟು ಜೋಪಾನವಾಗಿ ನೋಡಿಕೊಂಡ. ಒಳ್ಳೆಯ ಕಾಲೇಜಿನಲ್ಲಿ ಎಂಜಿನಿಯರಿಂಗ್ ಓದಿಸಿದ. ನನಗೆ ನೀನೇ ಪ್ರಪಂಚ. ನೀನು ಜೊತೆಗಿಲ್ಲದೆ ನಾನು ಬದುಕಲಾರೆ ಎಂಬುದನ್ನು ಪರೋಕ್ಷವಾಗಿ ಮನದಟ್ಟು ಮಾಡಿಕೊಟ್ಟ.ಮುಂದೊಂದು ದಿನ- 'ನನ್ನ ಕ್ಲಾಸ್ ಮೇಟ್ ಹುಡುಗೀನ ಲವ್ ಮಾಡಿದೀನಪ್ಪಾ. ಅವಳನ್ನೇ ಮದುವೆ ಆಗ್ತೀನಿ. ಅವರ ಮನೇಲಿ ಒಪ್ಪಿದಾರೆ. ನಿನ್ನ ಒಪ್ಪಿಗೆ ಬೇಕಪ್ಪಾ...' ವಿಧೇಯನಾಗಿಯೇ ಹೇಳಿದ್ದ ಮಗ. ರಂಗಸ್ವಾಮಿ ಅದನ್ನೂ ಆಕ್ಷೇಪಿಸಲಿಲ್ಲ. ಅದ್ಧೂರಿಯಾಗಿ ಮದುವೆ ಮಾಡಿಕೊಟ್ಟ. ಇದಾಗಿ ವರ್ಷ ಕಳೆಯುತ್ತಲೇ ಫ್ಯಾಕ್ಟರಿ ವ್ಯವಹಾರವನ್ನೆಲ್ಲ ಮಗನಿಗೆ ವಹಿಸಿಕೊಟ್ಟು, 'ನನಗೆ ವಯಸ್ಸಾಯಿತು ಕಣಪ್ಪಾ. ರೆಸ್ಟ್ ಬೇಕು ಅನ್ನಿಸ್ತಿದೆ. ಇನ್ಮುಂದೆ ನಾನು ಮನೇಲಿರ್ತೀನಿ. ಶ್ರದ್ಧೆ ಮತ್ತು ಎಚ್ಚರದಿಂದ ಫ್ಯಾಕ್ಟರಿ ನಡೆಸ್ಕೊಂಡು ಹೋಗು' ಎಂದಿದ್ದ. ಮರುದಿನವೇ ವಕೀಲರ ಜೊತೆಗೂ ಮಾತಾಡಿ ಫ್ಯಾಕ್ಟರಿಯನ್ನು ಮಗನ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿಬಿಟ್ಟ.

ಚಿತ್ರಾನ್ನ-ಕಾಯಿಚಟ್ನಿ, ದೋಸೆ-ಜಾಮೂನ್, ಬಿಸಿಬೇಳೆಬಾತ್-ಚಿಪ್ಸ್, ವಾಂಗೀಬಾತ್ ಆಲೂಬೋಂಡಾ, ಪಲಾವ್-ಗಟ್ಟಿಮೊಸರು-ಹೀಗೆ ಪ್ರತಿಯೊಂದು ತಿಂಡಿಗೂ ಒಂದು ಸೈಡ್ ಐಟಂ ಇರಬೇಕು ಎಂಬುದು ರಂಗಸ್ವಾಮಿಯ ಆಸೆಯಾಗಿತ್ತು. ಅದರಲ್ಲೂ ಪಲಾವ್-ಮೊಸರು ಅವನ ಮೆಚ್ಚಿನ ತಿಂಡಿಯಾಗಿತ್ತು. ನಾವು ಎಷ್ಟು ದಿನ ಇರ್ತೀವೋ ಗೊತ್ತಿಲ್ಲ. ಇರುವಷ್ಟು ದಿನ ಚೆನ್ನಾಗಿ ತಿಂದುಂಡು ಬಾಳಬೇಕು ಎಂಬುದು ಅವನ ವಾದವಾಗಿತ್ತು.

ಅವತ್ತು ರಂಗಸ್ವಾಮಿಯ ಮಗ ಜಾಗಿಂಗ್ ಮುಗಿಸಿ ಬಾಗಿಲ ಬಳಿ ಬಂದಾಗಲೇ ಪಲಾವ್‌ನ ಘಮ ಮೂಗಿಗೆ ಅಡರಿತು. ಓಹ್, ಇವತ್ತು ಅಪ್ಪನ ಫೇವರಿಟ್ ತಿಂಡಿ ಎಂದುಕೊಂಡು ಅವನು ಒಳಬರುವುದಕ್ಕೂ, ಡೈನಿಂಗ್ ಟೇಬಲ್ ಮುಂದೆ ತಿಂಡಿಗೆ ಕುಳಿತಿದ್ದ ರಂಗಸ್ವಾಮಿ-ಸ್ವಲ್ಪ ಮೊಸರು ಇದ್ರೆ ಕೊಡಮ್ಮ. ಪಲಾವ್ ಜೊತೆ ಮೊಸರು ಕೊಡೋದನ್ನೇ ಮರೆತಿದ್ದೀಯಲ್ಲ.. ಅನ್ನುವುದಕ್ಕೂ ಸರಿಹೋಯಿತು. ರಂಗಸ್ವಾಮಿಯ ಸೊಸೆ ಸರ್ರನೆ ಹೊರಬಂದವಳೇ-'ಇಲ್ಲ, ಮೊಸರಿಲ್ಲ; ಮೊಸರು ಖಾಲಿಯಾಗಿದೆ' ಅಂದು ಭರ್ರನೆ ಹೋಗಿಬಿಟ್ಟಳು. ಹೌದಾ? ಹೋಗ್ಲಿ ಬಿಡಮ್ಮ ಎನ್ನುತ್ತಾ ರಂಗಸ್ವಾಮಿ ತಿಂಡಿಯ ಶಾಸ್ತ್ರ ಮುಗಿಸಿದ.

ದಿನವೂ ಹೆಂಡತಿಯೊಂದಿಗೆ ತಿಂಡಿ ತಿಂದು ನಂತರ ಫ್ಯಾಕ್ಟರಿಗೆ ಹೋಗುವುದು ರಂಗಸ್ವಾಮಿಯ ಮಗನ ದಿನಚರಿಯಾಗಿತ್ತು. ಅವತ್ತೂ ಹಾಗೆಯೇ ತಿಂಡಿಗೆ ಕೂತವನು ಅಸಹನೆ ಮತ್ತು ಗೊಂದಲದಿಂದ ಹೆಂಡತಿಯನ್ನು ನೋಡಿದ. ಕಾರಣ; ಹೆಂಡತಿ ತಂದಿಟ್ಟ ತಿಂಡಿಯೊಂದಿಗೆ ಅರ್ಧ ಲೀಟರಿನಷ್ಟು ಗಟ್ಟಿ ಮೊಸರಿತ್ತು. "ಅಪ್ಪ ಕೇಳಿದಾಗ ಮೊಸರೇ ಇಲ್ಲ ಅಂದೆಯಲ್ಲ? ಇದು ಎಲ್ಲಿತ್ತು? ಯಾಕೆ ಸುಳ್ಳು ಹೇಳ್ದೆ?" ಎಂದು ಪ್ರಶ್ನಿಸಿದ. ಆಕೆ-'ಗಟ್ಟಿಯಾಗಿ ಮಾತಾಡಬೇಡಿ. ಸೈಲೆಂಟಾಗಿ ತಿಂಡಿ ತಿನ್ನಿ. ನಿಮ್ಮಪ್ಪ ಕೇಳ್ತಾರೆ ಅಂತ ಅವರು ಕೇಳಿದ್ದನ್ನೆಲ್ಲ ಕೊಡೋಕಾಗುತ್ತಾ? ಬಾಯಿ ಚಪಲ ಯಾವತ್ತೂ ಒಳ್ಳೆಯದಲ್ಲ. ಇವತ್ತು ಮೊಸರು ಕೇಳ್ತಾರೆ. ನಾಳೆ ತುಪ್ಪಾನೇ ಬೇಕು ಅಂತಾರೆ. ಕೇಳಿದ್ದನ್ನೆಲ್ಲ ರೆಡಿ ಮಾಡಿ ಇಟ್ಕೊಂಡಿರೋಕೆ ಆಗುತ್ತಾ?' ಅಂದುಬಿಟ್ಟಳು. ತಿರುಗಿ ಮಾತಾಡಿದರೆ ಜಗಳ ಆಗುತ್ತೆ. ಜಗಳ ಆಗಿಬಿಟ್ರೆ ರಾತ್ರಿ ಅನ್ನೋದು ನರಕ ಆಗುತ್ತೆ. ಉಹೂಂ, ಅಂಥ ಪರಿಸ್ಥಿತಿ ಜೊತೆಯಾಗಬಾರದು ಎಂದು ಯೋಚಿಸಿದ ರಂಗಸ್ವಾಮಿಯ ಮಗ, ಮೌನವಾಗಿ ಫ್ಯಾಕ್ಟರಿಗೆ ಹೋಗಿಬಿಟ್ಟ. ರಂಗಸ್ವಾಮಿ, ಮನೆಯ ಹೊರಗಿನ ಕೈ ತೋಟದಲ್ಲಿ ಇದ್ದುದರಿಂದ ಗಂಡ-ಹೆಂಡಿರ ದುಸುಮುಸು ಅವನಿಗೆ ಗೊತ್ತಾಗಲೇ ಇಲ್ಲ.

ಅವತ್ತು ನಾಲ್ಕೈದು ಕಂಪನಿಗಳ ಮುಖಂಡರೊಂದಿಗೆ ಹೋಟೆಲೊಂದರಲ್ಲಿ ವ್ಯವಹಾರ ಸಂಬಂಧಿ ಮೀಟಿಂಗ್ ನಡೆಸಬೇಕಾಗಿ ಬಂತು. ಊಟದ ಸಮಯದಲ್ಲಿ ಅವರೆಲ್ಲಾ- "ಊಟ ಬೇಡ, ದೋಸೆ ವಡಾ ಥರದ ಐಟಮ್ಸ್ ತಗೊಳ್ಳೋಣ. ಕಡೆಗೆ ಮೊಸರನ್ನ ಇರಲಿ" ಎಂದರು. ಮೊಸರನ್ನದಲ್ಲಿದ್ದ ಕೆನೆಮೊಸರು, ದಾಳಿಂಬೆ, ಗೋಡಂಬಿಯ ಚೂರುಗಳನ್ನು ಕಂಡಾಗ ಥಕ್ಕನೆ, ಮೊಸರು ಇದ್ಯಾ ಎಂದು ಕೇಳಿದ ಅಪ್ಪನ ಮುಖವೇ ಎದುರು ಕಂಡಂತಾಗಿ ರಂಗಸ್ವಾಮಿಯ ಮಗ ತತ್ತರಿಸಿಹೋದ. ತನಗಾಗಿ ಏನೆಲ್ಲಾ ತ್ಯಾಗ ಮಾಡಿದ ತಂದೆಗೆ ಒಂದು ಕಪ್ ಗಟ್ಟಿ ಮೊಸರು ಕೊಡಲು ಆಗಲಿಲ್ಲವಲ್ಲ ಎಂಬ ಚಿಂತೆ ಅವನನ್ನು ಕ್ಷಣಕ್ಷಣಕ್ಕೂ ಕಾಡತೊಡಗಿತು.

ಉಹೂಂ, ಅವನ ಹೆಂಡತಿಗೆ ಇಂಥ ಯಾವ 'ಗಿಲ್ಟ್ ಕೂಡ ಇರಲಿಲ್ಲ. ಪ್ರತಿಯೊಂದು ತಿಂಡಿಗೂ ಮತ್ತೊಂದು ಸೈಡ್ ಐಟಂ ಹಾಕಿಕೊಡೋಕೆ ಇದೇನು ಹೋಟ್ಲಾ? ಇಡೀ ದಿನ ಮನೇಲಿ ಇರೋರು ಕೊಟ್ಟಿದ್ದನ್ನು ತಿಂದುಕೊಂಡು ತೆಪ್ಪಗಿರಬೇಕು ಅಲ್ವ ಎಂದೇ ಅವಳು ವಾದಿಸಿದಳು. ಬೆಡ್‌ರೂಂ, ಜಗಳದ ತಾಣವಾದರೆ ಇಡೀ ದಿನದ ಕೆಲಸ ಕೆಡುತ್ತೆ ಎಂದು ಗೊತ್ತಿದ್ದುದರಿಂದ ರಂಗಸ್ವಾಮಿಯ ಮಗ ಹೆಂಡತಿಗೆ ಎದುರು ಮಾತಾಡಲು ಹೋಗಲಿಲ್ಲ.

ಹೀಗೇ ವಾರ ಕಳೆಯಿತು. ಅವತ್ತೊಂದು ದಿನ-'ಯಾವುದೋ ಕೋರ್ಟ್ ಕೇಸ್ ಬಂದಿದೆಯಪ್ಪಾ. ನನಗೆ ಸ್ವಲ್ಪ ಕನ್‌ಫ್ಯೂಶನ್ ಇದೆ. ನೀನು ಜೊತೆಗಿದ್ರೆ ದೊಡ್ಡ ಧೈರ್ಯ. ಮಧ್ಯಾಹ್ನ ಬೇಗ ಬಂದ್ಬಿಡೋಣ...' ಎಂದೆಲ್ಲ ಹೇಳಿ ಆ ಮಗರಾಯ ತಂದೆಯೊಂದಿಗೆ ಕೋರ್ಟ್‌ಗೆ ಬಂದ. ಅಲ್ಲಿ ನೋಡಿದರೆ-ಫ್ಯಾಕ್ಟರಿ, ಮನೆ ಮತ್ತು ಇಡೀ ಆಸ್ತಿಯನ್ನು ರಂಗಸ್ವಾಮಿಯ ಹೆಸರಿಗೆ ಮರು ವರ್ಗಾಯಿಸಿದ ದಾಖಲೆ ಪತ್ರಗಳಿದ್ದವು. ಅವಕ್ಕೆಲ್ಲಾ ತುಂಬಾ ಒತ್ತಾಯದಿಂದಲೇ ಸಹಿ ಹಾಕಿಸಿದ ಮಗ- 'ಅಪ್ಪಾ, ನೀನು ಇನ್ನೊಂದು ಮದುವೆ ಮಾಡ್ಕೊಳಪ್ಪಾ. ಜನ ಏನಾದ್ರೂ ಅಂದುಕೊಳ್ಳಲಿ. ಅದರ ಬಗ್ಗೆ ಚಿಂತೆ ಮಾಡ್ಬೇಡ. ನಿನ್ನ ಜೊತೆಗೆ ನಾನಿರ್ತೀನಿ. ಈ ವಿಷಯದಲ್ಲಿ ನಿಂಗೆ ಸಪೋರ್ಟ್ ಮಾಡ್ತೀನಿ. ದಯವಿಟ್ಟು ಇನ್ನೊಂದು ಮದುವೆ ಮಾಡ್ಕೊ..' ಅಂದ.

ಈ ಮಾತುಗಳಿಂದ ರಂಗಸ್ವಾಮಿಗೆ ಅಚ್ಚರಿಯಾಯಿತು. 'ಯಾಕಪ್ಪಾ? ಯಾಕೆ ಹೀಗೆ ಹೇಳ್ತಿದೀಯ? ನಿನಗೆ ಏನಾದ್ರೂ ಕೊರತೆ ಆಯ್ತಾ? ನಾನು ನಿನಗೆ ಹೊರೆ ಅನ್ನಿಸಿಬಿಟ್ನಾ? ಏನಾದ್ರೂ ತಪ್ಪು ಮಾಡಿದೀನೇನೋ ನಾನು? ಎಲ್ಲವನ್ನೂ ನನ್ನ ಹೆಸರಿಗೇ ಮಾಡಿಸಿದೀಯಲ್ಲ ಯಾಕೋ..

ಈ ಮಾತುಗಳನ್ನು ಅಷ್ಟಕ್ಕೇ ತಡೆದ ರಂಗಸ್ವಾಮಿಯ ಮಗ ಹೇಳಿದ: ಛೆ, ಛೆ ಖಂಡಿತ ನಿನ್ನಿಂದ ಯಾವುದೇ ತಪ್ಪಾಗಿಲ್ಲಪ್ಪಾ. ಪ್ರತಿ ಹೆಂಗಸು, ತನ್ನ ಗಂಡ ಮತ್ತು ಮಕ್ಕಳ ಬಗ್ಗೆ ಮಾತ್ರ ವಿಶೇಷ ಕಾಳಜಿ ವಹಿಸ್ತಾಳೆ. ಉಳಿದವರನ್ನು ನಿರ್ಲಕ್ಷ್ಯದಿಂದ ನೋಡೋದು ಅವಳಿಗೆ ಅಭ್ಯಾಸ ಆಗಿಬಿಟ್ಟಿರುತ್ತೆ. ಅಂಥದೊಂದು ನಿರ್ಲಕ್ಷ್ಯದ ಅನುಭವ ನಿನಗೆ ಎಂದೆಂದೂ ಆಗದಿರಲಿ ಎಂಬ ಸದಾಶಯದಿಂದಲೇ ಇನ್ನೊಂದು ಮದುವೆ ಆಗು ಅಂತ ಒತ್ತಾಯಿಸ್ತಾ ಇದೀನಿ. ನಾಳೆಯಿಂದ ನಾನು ಹೆಂಡತಿಯೊಂದಿಗೆ ಬಾಡಿಗೆ ಮನೆಗೆ ಹೋಗ್ತೇನೆ. ಫ್ಯಾಕ್ಟರಿಗೆ ನೀನು ಎಂ.ಡಿ., ನೀನೇ ಸಿ.ಇ.ಓ. ನಾನು ಒಬ್ಬ ನೌಕರನಾಗಿ ಕೆಲಸ ಮಾಡ್ತೀನಿ. ನಮ್ಮಲ್ಲಿ ಎಂಜಿನಿಯರ್‌ಗಳಿಗೆ ಕೊಡ್ತೀಯಲ್ಲ; ಅಷ್ಟೇ ಸಂಬಳವನ್ನು ನನಗೂ ಕೊಡು. ಒಂದು ಬಟ್ಟಲಿನಷ್ಟು ಮೊಸರು ಸಂಪಾದಿಸಲು ಮನುಷ್ಯನಿಗೆ ಎಷ್ಟು ಕಷ್ಟ ಇದೆ ಎಂಬುದನ್ನು ನನ್ನ ಹೆಂಡತಿಗೆ ಪರಿಚಯ ಮಾಡಿಕೊಡಬೇಕು. ಅದರ ಜೊತೆಗೆ, ವೃದ್ಧಾಪ್ಯದಲ್ಲಿ ತುಂಬಾ ಮುತುವರ್ಜಿಯಿಂದ ನೋಡಿಕೊಳ್ಳುವ ಒಬ್ಬರು ನಿನ್ನೊಂದಿಗೆ ಇರುವಂತೆ ವ್ಯವಸ್ಥೆ ಮಾಡಬೇಕು. ಫ್ಯಾಕ್ಟರಿಯನ್ನು ನಿನ್ನ ಹೆಸರಿಗೆ ವರ್ಗಾಯಿಸಿದ್ದಕ್ಕೆ, ನಾಳೆಯಿಂದ ಒಬ್ಬ ಆರ್ಡಿನರಿ ನೌಕರನಾಗಿ ಕೆಲಸಕ್ಕೆ ಬರ್ತಿರೋದಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಒಳ್ಳೇದಾಗ್ಲಿ ಅಂತ ಆಶೀರ್ವದಿಸಪ್ಪ...'

ರಂಗಸ್ವಾಮಿ ಏನೂ ಮಾತಾಡಲಿಲ್ಲ. ನಡೆದಿರುವುದೇನೆಂದು ತನಗೆ ಅರ್ಥವಾಗಿದೆ ಎಂಬಂತೆ ಮಗನನ್ನು ಮೆಚ್ಚುಗೆಯಿಂದ ನೋಡಿದ.

ಅವನನ್ನು ಬಾಚಿ ತಬ್ಬಿಕೊಂಡು ಹಣೆಗೆ ಮುತ್ತಿಟ್ಟ........

ಮಕ್ಕಳಿಗೆ ಸಂಸ್ಕಾರ ಕಲಿಸಿದರೆ ಸಾಕು,

ಅವರೇ ಅವರ ಜೀವನವನ್ನ ಸುಂದರ ಮಾಡಿಕೊಳ್ಳುತ್ತಾರೆ,

ಹಣ, ಆಸ್ತಿ ಎಲ್ಲಾ ವ್ಯರ್ಥ....

ಸಂಸ್ಕಾರ ಮುಖ್ಯ.

# ಕನ್ನಡ ಮೊದಲನೇ ಪುಸ್ತಕವು.... 127 ವರ್ಷಗಳ ಹಿಂದೆ ಪ್ರಕಟವಾದ ಪ್ರಥಮ ಮುದ್ರಿತ ಪಠ್ಯ ಪುಸ್ತಕ!




**127 ವರ್ಷಗಳ ಹಿಂದೆ ಒಂದನೇ ತರಗತಿಗೆಂದು ರೂಪಿಸಿದ ಕನ್ನಡ ಪಠ್ಯಪುಸ್ತಕ ಹೇಗಿತ್ತು? ಅದರಲ್ಲಿ ಪಾಠಗಳನ್ನು ಸಿದ್ಧಪಡಿಸಲು ಯಾವ ನಿಯಮಗಳನ್ನು ಅನುಸರಿಸಲಾಗಿತ್ತು? ಎಂಬಂಥ ಕುತೂಹಲದ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿದೆ. ಶತಮಾನಕ್ಕೂ ಹಿಂದಿನ ಪಠ್ಯ ಪುಸ್ತಕದ ಪುಟಗಳು ಮತ್ತು ಅದರಲ್ಲಿನ ವಿವರಣೆಯ ಸ್ಯಾಂಪಲ್ ಇಲ್ಲಿದೆ...**

19ನೇ ಶತಮಾನದ ಆರಂಭದ ಕಾಲಘಟ್ಟದಲ್ಲಿ ಭಾರತದಲ್ಲಿ ಔಪಚಾರಿಕವಾಗಿ ಶಾಲಾ ಕಾಲೇಜುಗಳು. ಮುದ್ರಣ ಯಂತ್ರದ ಸಂಶೋಧನೆಯ ಕಾರಣದಿಂದಾಗಿ ಮುದ್ರಿತ ಪುಸ್ತಕಗಳು ಶಾಲಾ ಕಲಿಕಾ–ಬೋಧನೆಗೆ ಮುದ್ರಿಸಲ್ಪಟ್ಟವು.

ಹೀಗೆ 19ನೇ ಶತಮಾನದ ಉತ್ತರಾರ್ಧದ ಅಂದರೆ, 1898ರ ಕಾಲಮಾನದ "ಕನ್ನಡ ಮೊದಲನೇ ಪುಸ್ತಕವು"... ಎಂಬ ಶೀರ್ಷಿಕೆಯುಳ್ಳ ಒಂದನೇ ತರಗತಿಯ ಕನ್ನಡ ಪಠ್ಯ ಪುಸ್ತಕವು ಇತ್ತೀಚೆಗೆ ನನಗೆ ದೊರಕಿತು.

ಸದರಿ ಪುಸ್ತಕದ ಸಂಗ್ರಹಕಾರರು, ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಅಮಲಾಪುರ ಗ್ರಾಮದ ಕೆ.ವೆಂಕಟೇಶ್, ಸದರಿ ಪುಸ್ತಕವನ್ನು ವೆಂಕಟೇಶ್ ಬಹಳ ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ. ಈ ಪುಸ್ತಕ, ಅವರ ತಾಯಿ ಕೊಟ್ಟಿದ್ದಂತೆ. ಈ ಅಮೂಲ್ಯ ಪುಸ್ತಕದ ವಿವರ ಓದುಗರಿಗಾಗಿ...

ಆನಂತರದ ಪುಟದಲ್ಲಿ ಪಠ್ಯದ ಅನುಕ್ರಮಣಿಕೆಯನ್ನು ನೀಡಲಾಗಿದೆ. ಈ ಪುಸ್ತಕವು ಒಟ್ಟು 60 ಪುಟಗಳನ್ನು ಹೊಂದಿದ್ದು, 30 ಪಾಠಗಳನ್ನು ಹೊಂದಿದೆ. ಇದರಲ್ಲಿರುವ ಪಾಠಗಳನ್ನು ಅನುಕ್ರಮವಾಗಿ ನೋಡುವುದಾದರೆ, ಹಸು, ಕುದುರೆ, ನಾಯಿ, ಬೆಕ್ಕು, ಆಡು, ಜಟಕಾ ಗಾಡಿ, ನೀರಿನ ಅಡ್ಡೆ, ಕೋಳಿ, ಒರಳು–ಒನಕೆ, ಪಕ್ಷಿ, ನವಿಲು, ಅಕ್ಕಸಾಲಗರು, ..ಕರು, ರೆಕ್ಷಾ ಎಂಬ ಒಂಟೆತ್ತಿನ ಗಾಡಿ, ಲಾಳಾ ಕಟ್ಟುವುದು, ದೋಸೆ ಮಾರುವವರು, ಕುಣಿಯುವ ಕಪಿಗಳು, ಬೆರಣಿ, ಮಿಟಾಯಿ, ಸೀತಾಫಲ, ಬೀಸುವ ಕಲ್ಲು, ಕುಂಬಾರನು, ಎಳನೀರು, ತಾಯಿ, ತಂದೆ, ಮಗ, ಕಾರಾ ಅರೆಯುವ ಕಲ್ಲು, ಆನೆ, ಬಾವಿ, ಗಂಗೆತ್ತು, ಬಡಗಿ, ಅಗಸ, ದೇವರು ಹೀಗೆ ಒಂದನೇ ತರಗತಿಯ ಮಕ್ಕಳ ವಯೋಮಾನಕ್ಕೆ ತಕ್ಕುದಾದ ಮತ್ತು ಅವರು ಸುತ್ತಮುತ್ತಲ ನೋಡಿರಬಹುದಾದ ವ್ಯಕ್ತಿ, ವಸ್ತು, ವಿಷಯಗಳನ್ನೇ ಪಠ್ಯಾಂಶವನ್ನಾಗಿ ಆಯ್ಕೆ ಮಾಡಲಾಗಿದೆ.

ನಂತರದ ಪುಟಗಳಿಂದ ಪಾಠಗಳು ಆರಂಭವಾಗುತ್ತವೆ. ಪ್ರತಿ ಪಾಠಕ್ಕೂ ಒಂದೊಂದು ಆಕರ್ಷಕ ಚಿತ್ರವನ್ನು ನೀಡಲಾಗಿದೆ.

**ಉದಾಹರಣೆ :**

**ಹಸು:** ಇದು ಹಸು. ಈ ಹಸುವನ್ನು ನೋಡು. ಇದು ಒಳ್ಳೇ ಹಸು. ಇದು ಹಾಲು ಕೊಡುತ್ತದೆ. ಹಾಲು ಬೆಳ್ಳಗೆ ಇದೆ. ಹಾಲು ಎಷ್ಟು ರುಚಿ! ಹೀಗೆ ಪಾಠಗಳು ಪ್ರಾರಂಭವಾಗುತ್ತವೆ. ಪ್ರತಿ ಪಾಠದ ಕೊನೆಯಲ್ಲಿ ಸರಳ ಪ್ರಶ್ನೆಗಳಿವೆ. ಪ್ರತಿ ಪಾಠದ ಕೊನೆಯಲ್ಲಿ ಹೊಸ ಪದಗಳನ್ನು, ಅಂದರೆ ಮಕ್ಕಳಿಗೆ ಕಠಿಣವಾಗಬಹುದಾದ ಪದಗಳನ್ನು ಪರಿಚಯ ಮಾಡಿಸುವ ಉದ್ದೇಶದಿಂದ "ಹೇಳಿ ಬರೆಯಿಸಿ" ಎಂಬ ಚಟುವಟಿಕೆಯನ್ನು ನೀಡಲಾಗಿದೆ. ಉದಾಹರಣೆಗೆ: ಎಷ್ಟು ರುಚಿ, ಗೌಳಿಗನು, ಹೊಯ್ಯುತ್ತಾನೆ, ಪ್ರೀತಿಯಿಂದ, ನೋಡೋಣ, ಒದೆಯುತ್ತದೆಯೋ ಇತ್ಯಾದಿ. ಹೀಗೆ 30 ಪಾಠಗಳ ಕೊನೆಯಲ್ಲಿ ಪ್ರಶ್ನೆಗಳನ್ನು ಮತ್ತು "ಹೇಳಿ ಬರೆಯಿಸಿ" ಎಂಬ ಚಟುವಟಿಕೆಗಳನ್ನು ನೀಡಲಾಗಿದೆ.

ವೆಂಕಟೇಶ್ ಅವರ ಬಳಿ ಇರುವ ಶತಮಾನಗಳಷ್ಟು ಹಳೆಯ ಪುಸ್ತಕವೊಂದನ್ನು ಕಣ್ತುಂಬಿಕೊಳ್ಳುವ ಮತ್ತು ಓದುವ ಸದವಕಾಶ ದೊರೆತದ್ದು ನನ್ನನ್ನು ಗತಕಾಲಕ್ಕೆ ಕರೆದೊಯ್ದಿತು, ವರ್ಣಿಸಲಾಗದಷ್ಟು ಆನಂದವನ್ನು ನೀಡಿತು. ಈ ಅಮೂಲ್ಯ ಪುಸ್ತಕವನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿರುವ ಕೆಲಸ ಮಾಡಿದ್ದೇನೆ ಎಂಬ ಹೆಮ್ಮೆ ನನಗಿದೆ.

ತರುವಾಯದ ಪುಟದಲ್ಲಿ ಉಪಾಧ್ಯಾಯರುಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಅವು ಹೀಗಿವೆ... ಪಾಠ ಆರಂಭಿಸುವುದಕ್ಕೆ ಮೊದಲು ಬೋಧಕರು ಆ ಪಾಠದ ಚಿತ್ರದ ಕಡೆಗೆ ಬಾಲಕರ ಮನಸ್ಸನ್ನು ತಿರುಗಿಸಿಕೊಳ್ಳಬೇಕು. ಚಿತ್ರದಲ್ಲಿ ಕಾಣಿಸಿರುವ ಪ್ರತಿಯೊಂದು ಭಾಗವು ಮಕ್ಕಳ ಅವಗಾಹನೆಗೆ ಬರುವಂತೆ ಮಾಡಬೇಕು.

ಚಿತ್ರದಲ್ಲಿ ಸೂಚಿಸಿರುವ ವಸ್ತುಗಳನ್ನು ಕುರಿತು ಮಕ್ಕಳೊಂದಿಗೆ ಸಂಭಾಷಣೆ ಮಾಡಿ, ಅದರಿಂದ ಅವರಿಗೆ ಪಾಠದಲ್ಲಿ ಆಸಕ್ತಿಯುನ್ನುಂಟು ಮಾಡಬೇಕು. ಮಕ್ಕಳು ಚಿತ್ರದಲ್ಲಿನ ಆಯಾ ಭಾಗಗಳನ್ನು ನೋಡಿದ ಮಾತ್ರದಿಂದ ಅಲ್ಲದೇ, ಸಂಗತಿಗಳನ್ನು ಸಾಧ್ಯವಾದಷ್ಟು ಮುಂದಾಗಿಯೇ ತಿಳಿದುಕೊಳ್ಳುವಂತೆ ಮಾಡಬೇಕು. ಪಾಠದಲ್ಲಿನ ಸಂಗತಿಗಳನ್ನೆಲ್ಲ ಸಮಯೋಚಿತವಾಗಿ ತಕ್ಕಷ್ಟು ವಿಶ್ಲೇಷಿಸಿ ತಿಳಿಸಬೇಕು. ಪಾಠಕ್ಕೆ ಸಂಬಂಧಿಸಿದ ಅಂಶಗಳನ್ನು ಮಕ್ಕಳ ಗ್ರಹಿಕೆಗೆ ಅನುಗುಣವಾಗಿ ಕೊಂಚ ಹೆಚ್ಚು ಮಾಡಿ ತಿಳಿಸತಕ್ಕದ್ದು. ಪಾಠದ ಕೊನೆಯಲ್ಲಿ ಮಾದರಿಗಾಗಿ ಇರುವ ಪ್ರಶ್ನೆಗಳನ್ನು ಮಾತ್ರವಲ್ಲ; ಅದಕ್ಕಿಂತಲೂ ಹೆಚ್ಚಾಗಿ ನಾನಾ ವಿಧದ ಪ್ರಶ್ನೆಗಳನ್ನು ಕೇಳಿ, ಮಕ್ಕಳಿಗೆ ಪಾಠವು ಚೆನ್ನಾಗಿ ಮಂದಟ್ಟಾಯಿತು ಎಂಬುದನ್ನು ತಿಳಿದುಕೊಳ್ಳಬೇಕು. ಆಯಾ ಪಾಠಗಳಲ್ಲಿ ತಿಳಿಯುಬರುವ ಬೋಧನೆಗಳ ಸಂಗಡ ಸಾಧ್ಯವಾಗುವಷ್ಟು ಬುದ್ಧಿವಾದಗಳನ್ನು ಅವರ ಗ್ರಹಿಕೆಗೆ ತಕ್ಕಂತೆ ಕಲಿಸಬೇಕು. ಕಠಿಣವಾದ ಪದಗಳಿಗೆಲ್ಲ ರೂಢಿಯಾದ ಸುಲಭ ಪದಗಳಿಂದ ಅರ್ಥವನ್ನು ಹೇಳಿಕೊಡಬೇಕು.

ಮುಖಪುಟದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಪುಸ್ತಕದ ವಿವರಗಳನ್ನು ಮುದ್ರಿಸಲಾಗಿದೆ. ಮುಖಪುಟದಲ್ಲಿ ಮುದ್ರಿತವಾಗಿರುವ ವಿವರಗಳನ್ನು ಒಟ್ಟು ಮೂರು ಭಾಗದಲ್ಲಿವೆ.

Macmillan's series of text books for Indian schools, canaries first reader, by E. Marsden, B.A., Inspector of schools, Central Circle, Second Edition.

ಕನ್ನಡ ಮೊದಲನೇ ಪುಸ್ತಕವು, ಇದು ಇ. ಮಾರ್ಸಡೆನ್, ಬಿ.ಎ., ಶಾಲಾ ಇನ್‌ಸ್ಪೆಕ್ಟರ್, ಸೆಂಟ್ರಲ್ ಸರ್ಕಲ್ ಇವರಿಂದ ರಚಿಸೋಣವಾಗಿದೆ.

Macmillan co., London, Bombay and Calcutta, Sold by The Basel Mission Book Tract Depository Mangalore, 1898, Price : 3As, All Rights reserved, ಎಂಬ ವಿವರವಿದೆ.

**–ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ**

## ನಗುವಿನ ಸರದಾರ ಚಾರ್ಲಿ ಚಾಪ್ಲಿನ್




ಡಿಸೆಂಬರ್ 25ರಂದು ಜನ್ಮದಿನ

# ಚಿನ್ನದ ಬೆಲೆ ನಾಗಾಲೋಟ: ಸಾಮಾನ್ಯರಿಗೆ ಶಾಕ್




ಚಿನ್ನದ ಬೆಲೆ ಏರಿಕೆಯ ನಾಗಾಲೋಟ ಮುಂದುವರಿದಿದೆ. ಡಿಸೆಂಬರ್ 2025ರ 15 ರಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬಂಗಾರದ ಬೆಲೆ 4 ಸಾವಿರ ರೂಪಾಯಿ ಏರಿಕೆ ಆಗುವ ಮೂಲಕ ಪ್ರತಿ 10 ಗ್ರಾಂ. ಚಿನ್ನದ ದರ ಗರಿಷ್ಠ 1,37,600 ರೂಪಾಯಿಗೆ ತಲುಪಿದೆ. ದೆಹಲಿ ಮಾರುಕಟ್ಟೆಯಲ್ಲಿ 99.9 ಶುದ್ಧತೆಯ ಚಿನ್ನದ ದರ 1,33,600 ರೂ. ತಲುಪಿತ್ತು. ಅಕ್ಟೋಬರ್ 17ರಂದು ಪ್ರತಿ ಗಾಂ ಚಿನ್ನದ ಬೆಲೆ 3.200 ರೂ. ಹೆಚ್ಚಳವಾಗಿ 10 1,34,800 ರೂ. ಮುಟ್ಟಿತ್ತು. ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಹಿನ್ನೆಲೆಯಲ್ಲಿ ಭಾರತದಲ್ಲಿ ಚಿನ್ನಕ್ಕೆ ಭಾರಿ ಬೇಡಿಕೆ ಇದೆ. ಈಗಾಗಲೇ ದೇಶದ ಹಲವೆಡೆ ಖರೀದಿ ಭರಾಟೆ ತೀವ್ರಗೊಂಡಿದೆ. ಹೀಗೆ ಬೆಲೆ ಏರಿಕೆಯಾದಲ್ಲಿ 10 ಗ್ರಾಂ ಚಿನ್ನದ ಬೆಲೆ 1.50 ಲಕ್ಷ ರೂ. ಸನಿಹ ಬರಬಹುದೆಂದು ನಿರೀಕ್ಷಿಸಲಾಗಿದೆ.

ಚಿನ್ನ ಮತ್ತು ಬೆಳ್ಳಿ ದರ ತೀವ್ರವಾಗಿ ಏರಿಕೆಯಾಗುತ್ತಿರುವುದಕ್ಕೆ ಜಾಗತಿಕ ರಾಜಕೀಯ ಉದ್ವಿಗ್ನತೆಯ ಹೆಚ್ಚಳ ಮತ್ತು ಜಾಗತಿಕ ಬೆಳವಣಿಗೆ ಕುರಿತ ಅನಿಶ್ಚಿತತೆಯೇ ಕಾರಣವೆಂದು ಭಾರತ ಸರ್ಕಾರದ ಹಣಕಾಸು ಸಚಿವಾಲಯ ಪ್ರತಿಪಾದಿಸಿದೆ. 5 ವರ್ಷ ಅವಧಿಯಲ್ಲಿ ಶೇ.60 ಹೆಚ್ಚಳ. 2025 ರಲ್ಲಿ ಶೇ.39 ಏರಿಕೆ ಕಂಡ ಚಿನ್ನ. 2024ರಲ್ಲಿ ಶೇ.27ರಷ್ಟು ದರ ಏರಿಕೆ. 2025 ಜನವರಿ–ಡಿಸೆಂಬರ್ ಅವಧಿಯಲ್ಲಿ ಏರಿಕೆ ಕಂಡ ಚಿನ್ನದ ಬೆಲೆ. ಫೆಬ್ರವರಿ– 85,300 (10 ಗ್ರಾಂ ದರ). ಮಾರ್ಚ್–87,500 ರೂ.ಗೆ ಹೆಚ್ಚಳ. ಏಪ್ರಿಲ್ –98,000 ರೂ. ಮುಟ್ಟಿದ ಚಿನ್ನ. ಜೂನ್–1 ಲಕ್ಷ ರೂ.ಗಡಿ ದಾಟಿ ದಾಖಲೆ. ಆಗಸ್ಟ್–1,05,170 ರೂ.ಗೆ ಹೆಚ್ಚಳ. ಅಕ್ಟೋಬರ್–1,32,770 ರೂ.ಗೆ ಏರಿಕೆ. 15 ಡಿಸೆಂಬರ್–1,37,600 ರೂಪಾಯಿ.

ಚಿನ್ನದ ಬೆಲೆ ಏರಿಕೆ ಏಕೆ? ಭೌಗೋಳಿಕ ರಾಜಕೀಯದ ಉದ್ವಿಗ್ನತೆ ಪರಿಗಣಿಸಿದಲ್ಲಿ ವಿಶ್ವ ಮಾರುಕಟ್ಟೆಯ ಆಮದು ಮತ್ತು ರಫ್ತು ವ್ಯವಹಾರದಲ್ಲಿ ಏರುಪೇರಾಗಿದ್ದು ಅಲ್ಪ ಪ್ರಮಾಣದ ಬೇಡಿಕೆ ಪೂರೈಕೆಯಲ್ಲಿ ವ್ಯತ್ಯಾಸವಾಗಿ ಬೆಲೆ ಏರಿಕೆಗೆ ಮೂಲ ಕಾರಣವಾಗಿರುತ್ತದೆ. ಇದಲ್ಲದೆ ಜಾಗತಿಕ ಬೆಳವಣಿಗೆ ಮೇಲಿನ ಅನಿಶ್ಚಿತತೆ. ಕುಸಿತ ಕಾಣು ತ್ತಿರುವ ಡಾಲರ್ ಮೌಲ್ಯ. ಅಮೇರಿಕದ ಕೇಂದ್ರ ಬ್ಯಾಂಕ್‌ಗಳಿಂದ ಖರೀದಿ ಹೆಚ್ಚಳ. ಭಾರತದಲ್ಲಿ ಮದುವೆ, ಮುಂಜಿ ಇನ್ನಿತರ ಸಮಾರಂಭಗಳಿಗೆ ಅತ್ಯವಶ್ಯಕವಾಗಿ ಬಂಗಾರದ ವಸ್ತುಗಳ ಬಳಕೆ ಮತ್ತು ಉಪಯೋಗಿಸುವುದರಿಂದ ಬೇಡಿಕೆ ಹೆಚ್ಚುತ್ತಿರುವುದು. ಮತ್ತು ಬಡ್ಡಿ ದರ ಕಡಿತದಿಂದ ಹಾಗೂ ಬಂಗಾರದ ಪೂರೈಕೆಯಲ್ಲಿನ ಕೊರತೆಯಿಂದಾಗಿ ಬೆಲೆ ಏರಿಕೆಗೆ ಹಲವಾರು ಕಾರಣಗಳಿವೆ.

# ಅಡುಗೆಗೆ ಕೊಬ್ಬರಿ ಎಣ್ಣೆಯಾ...



ಅದು ಬರಿ ಮಂಗಳೂರು ಕೇರಳದಲ್ಲಿ ಮಾತ್ರ ಬಳಸುವುದು ನಮ್ಮಲ್ಲೆಲ್ಲ.... ಸೂರ್ಯಕಾಂತಿ ಎಣ್ಣೆಯನ್ನೇ ಬಳಸುವುದು ... ಆ ಸೂರ್ಯಕಾಂತಿ ಬೀಜಗಳಿಂದಾದ ಎಣ್ಣೆ ಎಲ್ಲಿ ಸಿಗುತ್ತದೆ ಎಂದರೆ... ಅಂಗಡಿಯಲ್ಲಿ ಸಿಗುತ್ತದೆ... ಅಂಗಡಿಯವರು ಕೊಡುವ ಆ ಪ್ಯಾಕೆಟ್ ಮೇಲೆಯೇ ಸೂರ್ಯಕಾಂತಿಯ ಹೂವಿನ ಚಿತ್ರವಿರುತ್ತದೆ... ನಾವು ಅದನ್ನೇ ಬಳಸುವುದು ಹ್ಮ್... ನೀವು ಬಳಸುತ್ತಿರುವುದು ಸೂರ್ಯಕಾಂತಿ ಬೀಜದ ಎಣ್ಣೆಯಲ್ಲ.... ಹಾಗೆಂದು ತಿಳಿದುಕೊಂಡಿರುವಿರಿ ಅಷ್ಟೇ ಅದು... ಫ್ಯಾಕ್ಟರಿಯಲ್ಲಿ ತಯಾರಾದ ರಾಸಾಯನಿಕ ಯುಕ್ತ... ಎಣ್ಣೆಯಂತಿರುವ ದ್ರವರೂಪದ ವಸ್ತು... ಕೆಲವೊಂದು ಮೂಲಗಳು ಹೇಳುವ ಪ್ರಕಾರ ಆ ಎಣ್ಣೆಗೆ ಕ್ರೂಡ್ ಆಯಿಲ್ ನಲ್ಲಿ ಎಲ್ಲವನ್ನು ತೆಗೆದುಕೊಂಡ ಮೇಲೆ ಉಳಿದುಕೊಂಡಿರುವ ಬೇಡವಾದ ದ್ರವರೂಪದ ಪದಾರ್ಥವನ್ನು ಈ ಎಣ್ಣೆಗೆ ಮಿಕ್ಸ್ ಮಾಡಿ ಅದಕ್ಕೆ ಆ ಎಣ್ಣೆಗಳ ಫ್ಲೇವರ್ ಅನ್ನು ಕೊಡುತ್ತಾರೆ... ಇದು ನನಗೂ ಪೂರ್ಣವಾಗಿ ಗೊತ್ತಿಲ್ಲ ಮತ್ತು ತಿನ್ನುತ್ತಿರುವ ನಿಮಗೂ ಪೂರ್ಣವಾಗಿ ಇದರ ಬಗ್ಗೆ ಗೊತ್ತಿಲ್ಲ ಇದರ ಬಗ್ಗೆ ಚೂರು ಕಲ್ಪನೆಯೇ ಇಲ್ಲ ಚೂರು ತಿಳಿದಿಲ್ಲ ಎಂದ ಮೇಲೆ ಇದನ್ನು ಬಳಸುವುದು ಎಷ್ಟರಮಟ್ಟಿಗೆ ಸರಿ... ದೊಡ್ಡ ದೊಡ್ಡ ನಟ ನಟಿಯರು ಈ ಎಣ್ಣೆಯ ಪ್ಯಾಕ್ ಇಟ್ಟುಕೊಂಡು ದುಡ್ಡಿಗೋಸ್ಕರ ಅವರೇನೋ ಇದನ್ನು ಪ್ರಮೋಟ್ ಮಾಡುತ್ತಾರೆ.... ಆದರೆ ಇದರಲ್ಲಿ ಏನಿದೆ ಎಂದು ಅವರಿಗೂ ತಿಳಿದಿಲ್ಲ ಆದರೆ ಹಿಂದಿನ ಕಾಲದಲ್ಲಿ ಎಣ್ಣೆ ಎಂದರೆ ಕಣ್ಣ ಮುಂದೆಯೇ ಎತ್ತಿನಗಾಣದಲ್ಲಿ ತಯಾರಾಗುತ್ತಿತ್ತು ಅದನ್ನೇ ನಮ್ಮ ಹಿರಿಯರೆಲ್ಲರೂ ಕೂಡ ಬಳಸುತ್ತಿದ್ದರು ಹಾಗೂ ಆರೋಗ್ಯವಾಗಿದ್ದರು ಆದರೆ... ಆ ಆರೋಗ್ಯ ನಮಗಿಲ್ಲ ಯಾಕೆ, ಏಕೆಂದರೆ ನಮಗೆ ಗೊತ್ತಿಲ್ಲದೆ ನಮ್ಮ ಬೆನ್ನಿಂದೆ ನಡೆಯುವ ದಂಧೆಗಳಿಗೆ ನಾವೆಲ್ಲರೂ ಬಲಿಯಾಗುತ್ತಿದ್ದೇವೆ ಹಾಲು ಅದು ಕೂಡ ಪ್ಯಾಕೆಟ್ ನಲ್ಲಿ ಬರುತ್ತದೆ ಅಲ್ಲಿ ಏನಿದೆ ಎಂದು ನಮಗೂ ತಿಳಿದಿಲ್ಲ ಎಣ್ಣೆ ಅದು ಕೂಡ ಪ್ಯಾಕೆಟ್ ನಲ್ಲಿ ಬರುತ್ತದೆ ಅದರಲ್ಲಿ ಏನಿದೆ ಎಂದು ನಮಗೂ ಗೊತ್ತಿಲ್ಲ ನಿಮಗು ಗೊತ್ತಿಲ್ಲ

ತರಕಾರಿ ಅದು ಕೂಡ ನಮಗೆ ಸಿಗುತ್ತದೆ ಆದರೆ ಅದನ್ನು ಯಾವ ರೀತಿ ಬೆಳೆದಿದ್ದಾರೆ ಎಂದು ನಮಗೂ ಗೊತ್ತಿರುವುದಿಲ್ಲ ನಿಮಗೂ ಗೊತ್ತಿರುವುದಿಲ್ಲ. ಈ ರೀತಿ ಗೊತ್ತಿಲ್ಲದಿರುವುದನ್ನೆಲ್ಲ ತಿಂದು ತಿಂದು ತಿಂದು ಆರೋಗ್ಯ ಕೆಡಿಸಿಕೊಂಡು ಇವತ್ತು ಯುವಕರಿಗೂ ಕೂಡ ಹೃದಯಾಘಾತವಾಗುತ್ತಿದೆ. ಹಾಗಾಗಿ ನಿಮ್ಮ ಕಣ್ಣ ಮುಂದೆ ನೀವೇ ಎಣ್ಣೆಯನ್ನು ಆಡಿಸಿಕೊಂಡು.. ಕೊಬ್ಬರಿ ಕಡಲೆ ಕಾಯಿ ಸೂರ್ಯಕಾಂತಿ ಬೀಜ ಈ ರೀತಿ ನಿಮ್ಮ ಆಯ್ಕೆ ಯಾವುದೇ ಇದ್ದರೂ ನಿಮ್ಮ ಕಣ್ಣಮುಂದೆ ಅದು ಎಣ್ಣೆ ಯಾಗಿ ಬಂದಾಗ ಅದನ್ನು ನೀವು ಬಳಸುವುದಕ್ಕೆ ಯೋಗ್ಯ ಎಂದು ಭಾವಿಸಬಹುದು ಇಲ್ಲವಾದರೆ... ಅವರು ಮಾಡುತ್ತಿರುವ ದಂಧೆಗಳಿಗೆ ಬಲಿಯಾಗಬಹುದು ಅಷ್ಟೇ.

# ಸುವರ್ಣ ರಾಮನ ಚಿತ್ರಪಟ



**ರಾ**ಮಾಯಣ ಮತ್ತು ಮಹಾಭಾರತದ ಪುರಾಣ ಧರ್ಮಗ್ರಂಥಗಳು ನಮ್ಮ ಪೂರ್ವಜರು ನಮಗಾಗಿ ಬಿಟ್ಟು ಹೋಗಿರುವ ಈ ಸಾಂಸ್ಕೃತಿಕ ಆಸ್ತಿಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವುದೇ ನಮ್ಮೆಲ್ಲರ ಕರ್ತವ್ಯ.

ಶ್ರೀಮತಿ ಜಯಶ್ರೀಫಣೇಶ್ W/o ಡಾ. ಫಣೀಶ್ ಬೆಂಗಳೂರು ನಿವಾಸಿಯಾಗಿದ್ದು ಮೂಲತ: ಇವರು ಅರಕಲಗೂಡು ತಾಲೂಕಿನ ಅಗ್ರಹಾರ ಗ್ರಾಮದವರಾಗಿರುತ್ತಾರೆ. ಇವರು ರಾಮನಾಥಪುರದ ಶ್ರೀ ಪಟ್ಟಾಭಿರಾಮ ಗ್ರಾಮಾಂತರ ಪ್ರೌಢಶಾಲೆಯಲ್ಲಿ 10ನೇ ತರಗತಿವರೆಗೂ ವ್ಯಾಸಂಗ ಮಾಡಿರುತ್ತಾರೆ. ಕೊಣನೂರಿನ ಬಿ ಎಂ ಶೆಟ್ಟಿ ಕಾಲೇಜಿನಲ್ಲಿ ಪಿಯುಸಿ ಮುಗಿಸಿರುತ್ತಾರೆ. ಉನ್ನತ ವ್ಯಾಸಂಗವನ್ನು ಹಾಸನದಲ್ಲಿ ಮಾಡಿರುತ್ತಾರೆ.

ನಂತರ ಇವರು ತಾಲೂಕಿನ ದೊಡ್ಡ ಮಗ್ಗೆ ಗ್ರಾಮದ ಪ್ರಖ್ಯಾತ ಮೂಳೆ ತಜ್ಞರಾದ ಡಾ. ಪಣೀಶ್‌ರವರನ್ನು ವಿವಾಹವಾಗಿ ಬೆಂಗಳೂರಿನ ರಾಜಾಜಿನಗರದಲ್ಲಿ ವಾಸವಾಗಿದ್ದು ಇವರಿಗೆ ಖ್ಯಾತ ನೃತ್ಯಗಾರ್ತಿ ಸಂಗೀತ ಎಂಬ ಮಗಳು ಮತ್ತು ಶ್ರೇಯಸ್ ಎಂಬ ಇಬ್ಬರು ಮಕ್ಕಳಿದ್ದಾರೆ. ಈ ಇಬ್ಬರು ಮಕ್ಕಳು ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳಿದ್ದಾರೆ. ಶ್ರೀಮತಿ ಜಯಶ್ರೀರವರು ಅಯೋಧ್ಯೆಯ ಶ್ರೀ ಬಾಲ ರಾಮಮೂರ್ತಿಯನ್ನು ಮಾಡುವ ಸಂಕಲ್ಪ ಮಾಡಿಕೊಂಡು ಒಂದು ಆಧ್ಯಾತ್ಮಿಕ ನಿರ್ಧಾರದಿಂದ 9 ತಿಂಗಳ ಹಿಂದೆ ಇವರು ಪ್ರಾರಂಭಿಸಿದರು. ಅದರಂತೆ ಇವರು ಒಂಬತ್ತು ತಿಂಗಳು ಪ್ರತಿದಿನ 18 ಗಂಟೆಗಳ ಶ್ರಮದಿಂದ (2832 ಗಂಟೆಗಳು) ಶ್ರೀ ರಾಮನನ್ನು ಜಪಿಸುತ್ತಾ ಚಿನ್ನ ವಜ್ರ ವೈಢೂರ್ಯ ಮತ್ತು ನವರತ್ನಗಳನ್ನು ತಂದು ಸಂಪೂರ್ಣ ತಮ್ಮ ಸ್ವಂತ ಖರ್ಚಿನಿಂದ ಮಾಡಿರುತ್ತಾರೆ. ಇದರ ಅಂದಾಜು ವೆಚ್ಚ ಎರಡು ಕೋಟಿಗಳು ಆಗಿರುತ್ತದೆ.

ಇವರು ನಿರ್ಮಿಸಿರುವ ಶ್ರೀ ಬಾಲರಾಮ ವಿಗ್ರಹವು ಸುಮಾರು 6 ಅಡಿಗಳು ಎತ್ತರವಿದ್ದು ಇದರ ಸುತ್ತಲೂ ಶ್ರೀ ಮಹಾವಿಷ್ಣುವಿನ ದಶಾವತಾರ ಮೂರ್ತಿಗಳನ್ನು ಮತ್ತು ಕೆಳಭಾಗದಲ್ಲಿ ನವಗ್ರಹ ಮೂರ್ತಿಗಳನ್ನು ಸಹ ನಿರ್ಮಿಸಿರುತ್ತಾರೆ. ಇವರ ಈ ಮಹತ್ಕಾರ್ಯಕ್ಕೆ ಅವರ ಪತಿ ಶ್ರೀಫಣಿಶ್‌ರವರು ಸಂಪೂರ್ಣ ಸಹಕಾರ ನೀಡಿದ್ದು ಶ್ರೀಮತಿ ಜಯಶ್ರೀಯವರ ಶ್ರದ್ಧಾ ಪೂರ್ವಕ ಶ್ರಮದಿಂದ ಈಗ ಮನಮೋಹಕ ಅದ್ಭುತವಾದ ಶ್ರೀ ಬಾಲ ರಾಮಮೂರ್ತಿಯು ಮೂಡಿಬಂದಿದ್ದು ಈ ಮೂರ್ತಿಯನ್ನು ಕುಟುಂಬಸ್ಥರು ಮತ್ತು ಸ್ನೇಹಿತರೊಂದಿಗೆ ಸೇರಿ ಅಯೋಧ್ಯೆಯ ಶ್ರೀ ಬಾಲರಾಮ ಮಂದಿರದಲ್ಲಿ ಸ್ಥಾಪಿಸಲು ನಿಶ್ಚಯಿಸಿದ್ದು ಇದೇ ತಿಂಗಳ 28ನೇ ತಾರೀಕಿನಂದು ಅಯೋದ್ಯ ರಾಮಮಂದಿರದಲ್ಲಿ ಅನಾವರಣಗೊಳ್ಳಲಿದೆ. ಅಂದೆ ಅವರ ಪುತ್ರಿ ಸಂಗೀತಾರವರಿಂದ ನಾಟ್ಯ ಕಾರ್ಯಕ್ರಮವು ಸಹ ಇರುತ್ತದೆ. ಈ ವಜ್ರ ಖಚಿತ ಮೂರ್ತಿಯನ್ನು ದರ್ಶನ ಮಾಡಲು ರಾಜ್ಯದ ಮೂಲೆ ಮೂಲೆಗಳಿಂದ ಒಂದು ತಿಂಗಳ ಕಾಲ ಸುಮಾರು 33,000 ಜನ ಭಕ್ತರು ದರ್ಶನ ಮಾಡಿ ಪುನೀತರಾಗಿರುತ್ತಾರೆ. ದಿನನಿತ್ಯವೂ ಬೆಳಗ್ಗಿನಿಂದ ಸಂಜೆವರೆಗೂ ಭಕ್ತರು ರಾಮನ ಕುರಿತು ಭಜನೆ ಮಾಡಿರುತ್ತಾರೆ. ದರ್ಶನ ಮಾಡಲು ಬಂದ ಎಲ್ಲಾ ಭಕ್ತರಿಗೂ ಈ ದಂಪತಿಗಳು ಊಟದ ವ್ಯವಸ್ಥೆಯನ್ನು ಮಾಡಿ ಜೊತೆಗೆ ಫಲ ತಾಂಬೂಲಗಳನ್ನು ನೀಡಿ ಸತ್ಕರಿಸುತ್ತಾರೆ.

ಇದರ ಮಾಹಿತಿಯನ್ನು ತಿಳಿದ ಉಡುಪಿಯ ಪೇಜಾವರ ಮಠದ ಶ್ರೀ ಅವರು ಸಹ ಬಾಲರಾಮಸ್ವಾಮಿ ಅವರ ದರ್ಶನ ಮಾಡಿ ಜಯಶ್ರೀ ದಂಪತಿಗಳಿಗೆ ಆಶೀರ್ವಾದ ಮಾಡಿ ಸನ್ಮಾನಿಸಿರುತ್ತಾರೆ. ಅರಕಲಗೂಡು ಕ್ಷೇತ್ರದ ಶಾಸಕರಾದ ಶ್ರೀ ಎ.ಮಂಜಣ್ಣನವರು ಸಹ ತಮ್ಮ ಗೆಳೆಯರೊಂದಿಗೆ ಇವರ ನಿವಾಸಕ್ಕೆ ಭೇಟಿ ನೀಡಿ ಬಾಲರಾಮ ಮೂರ್ತಿಯನ್ನು ನೋಡಿ ಆಶ್ಚರ್ಯದಿಂದ ಈ ದಂಪತಿಗಳನ್ನು ಹಾಗೂ ಅವರ ಶ್ರಮವನ್ನು ಗಮನಿಸಿ ಶ್ರೀಮತಿ ಜಯಶ್ರೀ ದಂಪತಿಗಳಿಗೆ ಸನ್ಮಾನ ಮಾಡಿರುತ್ತಾರೆ. ಸಂಗೀತ ಸಾಮ್ರಾಟ್ ರುದ್ರಪಟ್ಟಣ ಗ್ರಾಮದ ಶ್ರೀ ಆರ್.ಕೆ.ಪದ್ಮನಾಭನ್ ಅವರು ಸಹ ಶ್ರೀ ಬಾಲರಾಮ ಮೂರ್ತಿಯನ್ನು ಕಂಡು ಆನಂದದಿಂದ ತನ್ಮಯರಾಗಿ ರಾಮನ ಕುರಿತು ಗೀತೆಗಳನ್ನು ಸಹ ಹಾಡಿರುತ್ತಾರೆ. ಹೀಗೆ ಜಯಶ್ರೀರವರ ಸಂಕಲ್ಪದಿಂದ ಶ್ರದ್ದೆಯಿಂದ ಮೂಡಿ ಬಂದ ಶ್ರೀ ಬಾಲರಾಮ ಮೂರ್ತಿಯವರು ಸದರಿ ಅಯೋಧ್ಯೆಗೆ ಪ್ರಯಾಣಿಸುತ್ತಿದ್ದು ಅಯೋಧ್ಯೆಯ ರಾಮಮಂದಿರದಲ್ಲಿ ಸ್ಥಾಪಿತಗೊಂಡು ಅಲ್ಲಿ ಎಲ್ಲಾ ಭಕ್ತರಿಗೂ ದರ್ಶನ ನೀಡಲಿದೆ. ಈ ದಂಪತಿಗಳ ಈ ಮಹಾನ್ ಕಾರ್ಯಕ್ಕೆ ಜಿಲ್ಲೆಯ ತಾಲೂಕಿನ ಜನರು ಸಂತಸಪಟ್ಟಿದ್ದು ಶ್ರೀಮತಿ ಜಯಶ್ರೀ ದಂಪತಿಗಳಿಗೆ ಶ್ರೀರಾಮನು ಆಯಸ್ಸು, ಆರೋಗ್ಯ, ನೆಮ್ಮದಿ ಜೀವನ ಕೊಟ್ಟು ಒಳ್ಳೆಯದನ್ನು ಮಾಡಲಿ ಮತ್ತು ಇವರಿಂದ ಇನ್ನೂ ಹೆಚ್ಚಿನ ದೈವಕಾರ್ಯಗಳು ನಡೆಯಲಿ ಎಂದು ಹರಿಸಿರುತ್ತಾರೆ.

# ಭಾರತ ದೇಶದಲ್ಲಿ 1 ಲಕ್ಷ ಪೆಟ್ರೋಲ್ ಬಂಕ್ ದಾಖಲೆ




**ದೇ**ಶದಲ್ಲಿ ಪೆಟ್ರೋಲ್ ಬಂಕ್‌ಗಳ ಸಂಖ್ಯೆ 1 ಲಕ್ಷ ದಾಟಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಅಂಕಿ ಅಂಶಗಳು ಹೇಳುತ್ತಿವೆ. ಈ ದಾಖಲೆ ಪೆಟ್ರೋಲ್ ಬಂಕ್‌ಗಳು ಬಹುಪಾಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ನಿಯಂತ್ರಣದಲ್ಲಿದ್ದು ಶೇ. 90ರಷ್ಟು ಬಂಕ್‌ಗಳು ಸರ್ಕಾರದ ಅಧೀನದ ಏಜೆನ್ಸಿಗಳೇ ನಿರ್ವಹಿಸುತ್ತಿವೆ.

ಈ ಹಿಂದೆ 2015ರಲ್ಲಿ ದೇಶದಲ್ಲಿ 50,451 ಪೆಟ್ರೋಲ್ ಬಂಕ್‌ಗಳು ಇದ್ದವು. ಅದು ಈ ನವೆಂಬರ್ 2025ರ ವೇಳೆಗೆ 1,00,266ಕ್ಕೆ ಹೆಚ್ಚಳವಾಗಿದೆ. ಅಮೆರಿಕ ಮತ್ತು ಚೀನಾ ಬಳಿಕ ಭಾರತದಲ್ಲಿ ಅತಿ ಹೆಚ್ಚು ಪೆಟ್ರೋಲ್ ಬಂಕ್‌ಗಳು ಇವೆ. ಪೆಟ್ರೋಲ್ ಬಂಕ್‌ಗಳ ಪೈಕಿ ಶೇ. 90ರಷ್ಟನ್ನು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಿರ್ವಹಿಸುತ್ತಿವೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) 41,664 ಬಂಕ್‌ಗಳನ್ನು ಹೊಂದಿದೆ. ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) 24.605 ಮತ್ತು ಎಚ್‌ಪಿಸಿಎಲ್ 24,418 ಬಂಕ್‌ಗಳನ್ನು ಹೊಂದಿದೆ. 2003–04ರಲ್ಲಿ ಖಾಸಗಿ ವಲಯವು 27 ಬಂಕ್ ಗಳೊಂದಿಗೆ ಪೆಟೋಲ್ ಬಂಕ್ ವ್ಯವಹಾರವನ್ನು ಆರಂಭಿಸಿತ್ತು. 2015ರಲ್ಲಿ ಖಾಸಗಿ ವಲಯದ ಪೆಟ್ರೋಲ್ ಬಂಕ್ಗಳ ಪ್ರಮಾಣ ಶೇ 5.9ರಷ್ಟಿತ್ತು, ಅದು ಪ್ರಸ್ತುತ ಶೇ 9.3ಕ್ಕೇರಿದೆ. ಖಾಸಗಿ ವಲಯದ ನಯಾರಾ ಎನರ್ಜಿ ಲಿಮಿಟೆಡ್ 6,921. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ 2,114 ಮತ್ತು ಬಿ.ಪಿ ಶೆಲ್ 346 ಬಂಕ್‌ಗಳನ್ನು ಹೊಂದಿದೆ. 2024ರ ವರದಿ ಪ್ರಕಾರ, ಅಮೆರಿಕದಲ್ಲಿ 1.96,643 ಮತ್ತು ಚೀನಾದಲ್ಲಿ 1,15,228 ಪೆಟ್ರೋಲ್ ಬಂಕ್‌ಗಳಿವೆ. ಗ್ರಾಮೀಣ ಪ್ರದೇಶಗಳಲ್ಲಿನ ಪೆಟ್ರೋಲ್ ಬಂಕ್‌ಗಳ ಪ್ರಮಾಣ 2015ರಲ್ಲಿ ಶೇ 22ರಷ್ಟಿತ್ತು. ಅದು ಈಗ ಶೇ 29ಕ್ಕೇರಿದೆ. ಪೆಟ್ರೋಲ್ ಬಂಕ್‌ಗಳು ಪೆಟ್ರೋಲ್ ಮತ್ತು ಡೀಸೆಲ್ ವ್ಯವಹಾರದ ಜೊತೆಗೆ ಇದೀಗ ಸಿಎನ್ಜಿಯಂತಹ ಪರ್ಯಾಯ ಇಂಧನವನ್ನು ಕೂಡ ಮಾರಾಟ ಮಾಡುತ್ತಿವೆ. ಅಲ್ಲದೆ ಇ.ವಿ ಚಾರ್ಜಿಂಗ್ ಕೇಂದ್ರಗಳನ್ನೂ ಹೊಂದಿವೆ.

ಪೆಟ್ರೋಲ್ ಬಂಕುಗಳು (ಪೆಟ್ರೋಲ್ ಪಂಪುಗಳು ಅಥವಾ ಇಂಧನ ಕೇಂದ್ರಗಳು) ಭಾರತದಲ್ಲಿ ಸಾರಿಗೆ ಮತ್ತು ಆರ್ಥಿಕ ವ್ಯವಸ್ಥೆಯ ಪ್ರಮುಖ ಅಂಗಗಳಾಗಿವೆ. ವಾಹನಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಭಾರತವು ಒಂದು ಲಕ್ಷಕ್ಕಿಂತ ಹೆಚ್ಚು ಪೆಟ್ರೋಲ್ ಬಂಕುಗಳನ್ನು ನಗರಗಳು, ಪಟ್ಟಣಗಳು, ಹೆದ್ದಾರಿಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೊಂದಿರುವ ವಿಶ್ವದ ಅತಿ ದೊಡ್ಡ ಇಂಧನ ವಿತರಣೆ ಜಾಲಗಳಲ್ಲಿ ಒಂದಾಗಿದೆ. ಭಾರತದಲ್ಲಿನ ಬಹುತೇಕ ಪೆಟ್ರೋಲ್ ಬಂಕುಗಳನ್ನು ಭಾರತೀಯ ತೈಲ ನಿಗಮ (ಐಒಸಿಎಲ್), ಭಾರತ್ ಪೆಟ್ರೋಲಿಯಂ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ (ಎಚ್‌ಪಿ ಸಿಎಲ್) ಎಂಬ ಸರ್ಕಾರಿ ತೈಲ ಕಂಪನಿಗಳು ನಿರ್ವಹಿಸುತ್ತಿವೆ. ಜೊತೆಗೆ ನಯಾರಾ ಎನರ್ಜಿ, ರಿಲಯನ್ಸ್/ಜಿಯೋ–ಬಿಪಿ, ಶೆಲ್ ಮುಂತಾದ ಖಾಸಗಿ ಸಂಸ್ಥೆಗಳು ಕೆಲವು ಪ್ರದೇಶಗಳಲ್ಲಿ ತಮ್ಮ ಜಾಲವನ್ನು ವಿಸ್ತರಿಸಿವೆ.

ಆಧುನಿಕ ಪೆಟ್ರೋಲ್ ಬಂಕುಗಳು ಇಂಧನ ಪೂರೈಕೆಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಪೆಟ್ರೋಲ್, ಡೀಸೆಲ್, ಸಿಎನ್‌ಜಿ, ಪ್ರೀಮಿಯಂ ಇಂಧನ, ಗಾಳಿ ತುಂಬಿಸುವ ವ್ಯವಸ್ಥೆ, ಡಿಜಿಟಲ್ ಪಾವತಿ, ಶೌಚಾಲಯ, ಚಿಲ್ಲರೆ ಅಂಗಡಿಗಳು ಹಾಗೂ ಆಹಾರ ಮಳಿಗೆಗಳಂತಹ ಸೌಲಭ್ಯಗಳು ಲಭ್ಯವಿವೆ, ವಿಶೇಷವಾಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ. ಒಟ್ಟಾರೆ, ಪೆಟ್ರೋಲ್ ಬಂಕುಗಳು ದೇಶದ ದಿನನಿತ್ಯದ ಸಂಚಾರ, ವ್ಯಾಪಾರ ಮತ್ತು ಆರ್ಥಿಕ ಅಭಿವೃದ್ಧಿಗೆ ಅವಿಭಾಜ್ಯ ಮೂಲ ಸೌಕರ್ಯವಾಗಿವೆ.

# ಪ್ರಧಾನಿ ಶಾಸ್ತ್ರೀಜಿ ಒಂದು ನೆನಪು




**ಈ** ಹಿಂದೆ ಅನೇಕ ಬಾರಿ ಪ್ರಧಾನಿ ಶಾಸ್ತ್ರಿಜಿ ಬಗ್ಗೆ ಓದಿದ ಒಂದು ನೆನಪು. ಅಲ್ಲಿ ಇಲ್ಲಿ ಓದಿದ್ದೆ ಆದ್ರೆ ಅದು ಭೈರಪ್ಪನವರ ಸ್ವಂತ ಅನುಭವ ಅಂತ ಗೊತ್ತಿರಲಿಲ್ಲ, ಭೈರಪ್ಪನವರ ಆತ್ಮಚರಿತ್ರೆ 'ಭಿತ್ತಿ' ಯಲ್ಲಿ ಈ ಘಟನೆ ಓದಿದಾಗ ಶಾಸ್ತ್ರೀಗಳ ಮೇಲಿನ ಗೌರವ ತುಂಬಾ ಹೆಚ್ಚಾಗಿಬಿಡ್ತು...

ಭೈರಪ್ಪನವರು ದೆಹಲಿಯ ಗ್ರೀನ್‌ಪಾರ್ಕ್‌ ನಲ್ಲಿರುವ ಒಂದು ಬರಸಾತಿಯಲ್ಲಿ ವಾಸವಿದ್ದಾಗ ಒಂದು ದಿನ ಚಿಕ್ಕ ಪ್ರಾಯದ ಇಬ್ಬರು ಬ್ಯಾಂಕ್ ಅಧಿಕಾರಿಗಳು ಅವರ ಮನೆಗೆ ಬಂದ್ರಂತೆ, ಅದರಲ್ಲಿ ಒಬ್ಬರು ಮ್ಯಾನೇಜರ್ ಮತ್ತೊಬ್ಬರು ಅಕೌಂಟೆಂಟ್, ಅಲ್ಲೇ ಹತ್ತಿರದಲ್ಲಿ ಬ್ಯಾಂಕ್ ಆಫ್ ಇಂಡಿಯಾದ ಹೊಸ ಶಾಖೆ ಓಪನ್ ಆಗ್ತಿತ್ತಂತೆ, ಅದರಲ್ಲೂ ಆ ಅಕೌಂಟೆಂಟ್ ಮುಖ ನೋಡ್ದಾಗ ಭೈರಪ್ಪನವರಿಗೆ ಎಲ್ಲೋ ನೋಡಿದ ನೆನಪು ಆದ್ರೆ ಎಲ್ಲಿ ಅಂತ ತಿಳಿಲಿಲ್ವಂತೆ, ಆ ಅಕೌಂಟೆಂಟ್ ಪ್ರಾಯ ಸುಮಾರು ಇಪ್ಪತ್ತಾರು ವರ್ಷ, ಅವರ ಬ್ಯಾಂಕಲ್ಲಿ ಒಂದು ಖಾತೆ ತೆಗೆಯರಿ ಅಂತ ಮನವಿ ಮಾಡಿಕೊಳ್ಳಲು ಬಂದಿದ್ರಂತೆ...ನಂತರ ಭೈರಪ್ಪನವರು ನಿಮ್ ಬ್ಯಾಂಕ್ ಮನೆಗೂ ಹತ್ತಿರವಿಲ್ಲ ಆಫೀಸಿಗೂ ಹತ್ತಿರವಿಲ್ಲ, ಅದು ಅಲ್ದೆ ನಾನು ಮಧ್ಯಮ ದರ್ಜೆಯ ಸಂಬಳದಾರ, ಠೇವಣಿ ಇಡುವ ಶಕ್ತಿ ಇಲ್ಲ, ನನ್ ಖಾತೆಯಿಂದ ನಿಮ್ಗೇನು ಉಪಯೋಗ ಅಂತ ಕೇಳಿದಾಗ ನಿಮ್ಮಂತವರ ಸಣ್ಣ ಖಾತೆಗಳೇ ನಮಗೆ ಸಾಕು ಒಮ್ಮೆ ಅವಕಾಶ ಕೊಟ್ಟು ನೋಡಿ ನೀವು ಮೆಚ್ಚುವಂತ ಸೇವೆ ಕೊಡ್ತೀವಿ ಅಂತ ಈ ಬ್ಯಾಂಕಿನವರು ಹೇಳಿದ್ರಂತೆ, ನಂತರ ಭೈರಪ್ಪನವರು ಖಾತೆ ತೆರೆದಾಗ ಅವರ ಸೇವೆ ನಿಜಕ್ಕೂ ಮೆಚ್ಚುವಂತೆ ಇತ್ತಂತೆ, ಆ ಅಕೌಂಟೆಂಟ್ ಅಂತೂ ಕೂಲಿ ಕಾರ್ಮಿಕರನ್ನ, ಬೀದಿ ಬದಿಯಲ್ಲಿ ತರಕಾರಿ ಮಾರುವವರನ್ನ, ಗಾರೆ ಕೆಲಸದವರನ್ನ ಕರ್ಕೊಂಡ್ ಬಂದು ಖಾತೆ ತೆಗೆಸುತ್ತಿದ್ರಂತೆ, ಆಮೇಲೆ ಭೈರಪ್ಪನವರಂತ ಓದಿದವರನ್ನ ಹಿಡಿದು ಓದದೇ ಇರುವವರಿಗೆ ಚೆಕ್ ಬರೆದು ಕೊಡಲು ಸಹಾಯ ಕೇಳ್ಕೋತಿದ್ರಂತೆ, ಆ ಅಕೌಂಟೆಂಟ್ ನೋಡಿ ಭೈರಪ್ಪನವರಿಗೆ ಸೇವಾ ಮನೋಭಾವ ಅಂದ್ರೆ ಈ ಥರ ಇರ್ಬೇಕು ಅಂತ ಅನ್ಸಿತ್ತಂತೆ..

ಒಂದು ದಿನ ಹತ್ ಗಂಟೆಗೆ ಭೈರಪ್ಪನವರು ಬ್ಯಾಂಕಿಗೆ ಹೋದಾಗ ದೊಡ್ಡ ಕ್ಯೂ ಇತ್ತಂತೆ, ನಗದಿನ ಕೌಂಟರ್ ಇನ್ನು ತೆಗೆದಿರಲಿಲ್ಲ, ಮ್ಯಾನೇಜರ್ ಬಂದು ನಮ್ ಅಕೌಂಟೆಂಟ್ ಇನ್ನೇನು ಬರುತ್ತಾರೆ ಅಂತ ಹೇಳಿದ್ರಂತೆ, ಅಲ್ಲಿಗೂ ಹನ್ನೆರಡು ನಿಮಿಷ ತಡವಾಗಿ ಅಕೌಂಟೆಂಟ್ ಬಂದು ಎಲ್ಲರ ಮುಂದೆ ನಾನು ಬರುತ್ತಿದ್ದ ಸಿಟಿಬಸ್ ಕೆಟ್ಟುನಿಂತಿತು ಆಗ ಆಟೋ ಸಿಗೋದು ಸ್ವಲ್ಪ ತಡವಾಯಿತು ದಯವಿಟ್ಟು ಕ್ಷಮಿಸಬೇಕು ಅಂತ ಓಡಿಹೋಗಿ ಖಜಾನೆಯ ಬಾಗಿಲು ತೆರೆದಾಗ ಭೈರಪ್ಪನವರ ಮುಂದೆ ನಿಂತಿದ್ದ ಒಬ್ಬರು ನೋಡಿ ಎಂತಹ ವಿನಯಪೂರ್ವಕ ನಡುವಳಿಕೆ, ಎಷ್ಟೇ ಆಗಲಿ ದೊಡ್ಡವರ ಮಗ, ತಂದೆಯ ಗುಣ ಬಂದಿದೆ ಎಂದಾಗ ಹಿಂದೆ ಇದ್ದ ಭೈರಪ್ಪನವರು ಯಾರ ಮಗ ಇವರು ಅಂತ ಕೇಳಿದಾಗ ಮುಂದೆ ನಿಂತಿದ್ದ ಖಾತೆದಾರ ಗೊತ್ತಿಲ್ಲವೇ ಅವರು ಲಾಲ್ ಬಹದ್ದೂರ್ ಶಾಸ್ತ್ರಿಯವರ ಮಗ ಅಂತ ಅಂದರಂತೆ...

ಆಗ ಭೈರಪ್ಪನವರಿಗೆ ಆಶ್ಚರ್ಯವಾಗಿ ಹೌದು ಅವತ್ತು ಮನೆಗೆ ಖಾತೆ ಓಪನ್ ಮಾಡೋಕೆ ಹೇಳಲು ಬಂದಾಗ ಎಲ್ಲೊ ನೋಡಿದ ನೆನಪು ಬಂದಿತ್ತಲ್ಲ, ವಾಸ್ತವವಾಗಿ ನೋಡಿದ್ದು ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನ ಮತ್ತು ಅವರ ಫೋಟೊಗಳನ್ನ, ಈತನ ಮುಖ ಅವರ ತಂದೆಯಂತೆಯೇ ಇದೆ, ತಕ್ಷಣ ಕೆಲಸ ಮುಗಿಸಿ ಸಂಜೆ ಮನೆಗೆ ಹಿಂದಿರುಗುವಾಗ ಮತ್ತೆ ಭೈರಪ್ಪನವರು ಬ್ಯಾಂಕಿಗೆ ಹೋಗಿ ಆತನ ಮುಂದೆ ಕೂತ್ರಂತೆ, ಆಗ ಆತ ಸೌಜನ್ಯದಿಂದ ಎದ್ದು ಮತ್ತೆ ಕುಳಿತರಂತೆ, ಭೈರಪ್ಪನವರು ಮಾತಾಡುತ್ತಾ ಬೆಳಿಗ್ಗೆ ತಡವಾಗಿ ಬಂದಿರಲ್ಲ ನೀವೊಂದು ಸ್ಕೂಟರ್ ಯಾಕೆ ತಗೋಬಾರ್ದು ಅಂತ ಕೇಳ್ದಾಗ ಶಾಸ್ತ್ರೀಜಿ ಮಗ ಸ್ಕೂಟರ್ ಸಾಲಕ್ಕೆ ಅರ್ಜಿ ಹಾಕಿದ್ದೆ ಬ್ಯಾಂಕ್ ಮಂಜೂರು ಮಾಡಿದೆ ಆದ್ರೆ ಸ್ಕೂಟರ್ ಕಂಪನಿಯಲ್ಲಿ ನನ್ನ ಸರದಿ ಬರಬೇಕಲ್ಲ ಅಂತ ಹೇಳಿದ್ರಂತೆ, ಮತ್ತೆ ಭೈರಪ್ಪನವರು ನೀವು ಶಾಸ್ತ್ರೀಜಿ ಮಗ ಅಂತ ಗೊತ್ತಿರ್ಲಿಲ್ಲ ನಿಮ್ ತಂದೆ ಅಂದರೆ ನನಗೆ ತುಂಬಾ ಗೌರವವಿತ್ತು ಅಂತ ಹೇಳಿ ಆತನ ಓದು ಮತ್ತಷ್ಟು ವಿಚಾರಗಳನ್ನ ಕೇಳಿದ್ರಂತೆ...ಮಕ್ಕಳು ಓದುವಾಗ ಶಾಸ್ತ್ರೀಜಿ ಕೇಂದ್ರ ಮಂತ್ರಿಗಳಾಗಿದ್ರಂತೆ, ಆದರೆ ಮಕ್ಕಳಿಗೆ ಒಂದೇ ಒಂದು ದಿನವೂ ಸರ್ಕಾರಿ ಕಾರು ಹತ್ತಲು ಅವಕಾಶ ಕೊಟ್ಟಿರ ಲಿಲ್ವಂತೆ, ಮನೆಯಲ್ಲಿ ಊಟ ಮಾಡಿಕೊಂಡು ಚಪಾತಿ ಡಬ್ಬಿಯನ್ನು ಬ್ಯಾಗಲ್ಲಿ ಹಾಕಿಕೊಂಡು ನಗರಸಾರಿಗೆ ಬಸ್ಸಿನಲ್ಲಿ ಕಾಲೇಜಿಗೆ ಹೋಗ್ಬೇಕಾಗಿತ್ತು, ಶಾಲಾ ಕಾಲೇಜುಗಳಲ್ಲಿ ತಮ್ಮ ಮಕ್ಕಳ ಹೆಸರಿನ ಮುಂದೆ ಶಾಸ್ತ್ರೀ ಅಂತ ಸೇರಿಸಿರಲಿಲ್ವಂತೆ, ನಿಮ್ಮ ನಿಮ್ಮ ಓದು ಮುಗಿದ ಮೇಲೆ ನೀವೆ ಪತ್ರಿಕೆಗಳಲ್ಲಿ ಜಾಹೀರಾತು ನೋಡಿ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳಿ, ಯಾವುದೇ ಕಾರಣಕ್ಕೂ ಉದ್ಯೋಗ ಕೊಡುವವರಿಗೆ ನನ್ನ ಹೆಸರು ತಿಳಿಯಕೂಡದು ಅಂತ ಮಕ್ಕಳಿಗೆ ಶಾಸ್ತ್ರೀಜಿ ಹೇಳಿದ್ರಂತೆ, ಈ ಅಕೌಂಟೆಂಟ್ ಬಿ.ಕಾಂ ಮುಗಿಸಿ ಬ್ಯಾಂಕಿನಲ್ಲಿ ಗುಮಾಸ್ತೆಯ ಕೆಲಸ ಹಿಡಿದು ನಂತರ ಬ್ಯಾಂಕ್ ಪರೀಕ್ಷೆಗಳನ್ನ ಪಾಸ್ ಮಾಡಿ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದ ಮೇಲೆ ಅಕೌಂಟೆಂಟ್ ಆಗಿ ಬಡ್ತಿ ಸಿಗ್ತಂತೆ...ನಂತರ ಭೈರಪ್ಪನವರು ಅದೇ ಭಿತ್ತಿಯಲ್ಲಿ ಹೇಳ್ತಾರೆ, ಶಾಸ್ತ್ರೀಜಿಯವರು ಬದುಕಿ ಪ್ರಧಾನಿಯಾಗಿ ಮುಂದುವರೆದಿದ್ದರೆ ಮತ್ತು ಪರಿಣಾಮವಾಗಿ ಸಾಮಾಜಿಕ ಮತ್ತು ವ್ಯಕ್ತಿಗತ ನೈತಿಕ ಮೌಲ್ಯಗಳು ಇಷ್ಟು ಪ್ರಪಾತಕ್ಕೆ ಇಳಿಯುತ್ತಿರಲಿಲ್ಲವೆಂದು ಅನೇಕ ಬಾರಿ ಯೋಚಿಸಿದ್ದೇನೆ...

ಕಳೆದ ತಿಂಗಳು ಭೈರಪ್ಪನವರ ಭಿತ್ತಿ ಓದುವಾಗ ಈ ವಿಚಾರ ಕಂಡ ತಕ್ಷಣ ಶಾಸ್ತ್ರೀಜಿಯುವರ ಹುಟ್ಟು ಹಬ್ಬದ ದಿನ ಬರೀಬೇಕು ಅಂತ ಅನ್ಕೊಂಡಿದ್ದೆ, ಶಾಸ್ತ್ರೀಜಿ ಬಗ್ಗೆ ಹೆಮ್ಮೆ ಪಡೋಕೆ ಈ ಥರದ ಅನೇಕ ವಿಚಾರಗಳು ಇದಾವೆ, ಒಟ್ನಲ್ಲಿ ಯಾರೂ ದ್ವೇಷಿಸದ ಚಿನ್ನದಂತಹ ವ್ಯಕ್ತಿತ್ವ ಅವರದ್ದು, ಭೈರಪ್ಪನವರು ಹೇಳಿದಂತೆ ಅವರು ಬದುಕಿ ಪ್ರಧಾನಿಯಾಗಿ ಮುಂದುವರೆದಿದ್ದರೆ ಭಾರತ ಆ ಕಾಲದಲ್ಲೇ ಜಾಗತಿಕವಾಗಿ ಮತ್ತಷ್ಟು ಎತ್ತರಕ್ಕೆ ಬೆಳೆದು ನಿಲ್ತಿತ್ತು, ಕೊನೆ ಪಕ್ಷ ಸ್ವಲ್ಪವಾದರೂ ಅವರ ಆಡಳಿತದಲ್ಲಿ ಭಾರತ ಸುಭಿಕ್ಷವಾಗಿತ್ತು ಅನ್ನೊ ಸಮಾಧಾನ ಇದೆ...ಫೈನಲಿ ಭಾರತ ಕಂಡಂತಹ ಅಪ್ರತಿಮ ದೇಶಭಕ್ತ, ಸರಳತೆಯ ಸಾಕಾರ ಮೂರ್ತಿ, ನಿಸ್ವಾರ್ಥ ಸೇವೆಯ ವ್ಯಕ್ತಿತ್ವ ಹೊಂದಿದ್ದ ಪ್ರಾಮಾಣಿಕ ರಾಜಕಾರಣಿ ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ಧನ್ಯವಾದಗಳು.




(ಕೃಪೆ: ಎಸ್.ಎಲ್. ಭೈರಪ್ಪನವರ ಭಿತ್ತಿ ಪುಸ್ತಕ)

## ರಕ್ಷಣಾ ಕ್ಷೇತ್ರದಲ್ಲಿ ಅದಾನಿ 1.8 ಲಕ್ಷ ಕೋಟಿ ಹೂಡಿಕೆ

ನವದೆಹಲಿ: ಏಷ್ಯಾದ ಎರಡನೇ ಅತ್ಯಂತ ಶ್ರೀಮಂತ ಕೈಗಾರಿಕೋದ್ಯಮಿ ಗೌತಮ್ ಅದಾನಿ, ರಕ್ಷಣಾ ವಲಯದಲ್ಲಿ 1.8 ಲಕ್ಷ ಕೋಟಿ ಹೂಡಿಕೆ ಮಾಡಲು ಯೋಜಿಸಿದ್ದಾರೆ. ಈ ಹೂಡಿಕೆಯು ಮಾನವರಹಿತ ವ್ಯವಸ್ಥೆಗಳು ಮತ್ತು ಸುಧಾರಿತ ಶಸ್ತ್ರಾಸ್ತ್ರಗಳ ಸಾಮರ್ಥ್ಯಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಅದಾನಿ ಡಿಫೆನ್ಸ್ & ಏರೋಸ್ಪೇಸ್ ವೇಗವರ್ಧಿತ ನಿಯೋಜನೆಯತ್ತ ಸಾಗಿದೆ ಮತ್ತು 2025ರಲ್ಲಿ ಭಾರತೀಯ ನೌಕಾಪಡೆ ಮತ್ತು ಸೇನೆಗೆ ದೃಷ್ಟಿ 10 ಯುಎವಿಯನ್ನು ಸೇರಿಸಲು ಯೋಜಿಸಿದೆ. 2026ರ ವೇಳೆಗೆ ಭಾರತದ ಖಾಸಗಿ ರಕ್ಷಣಾ ಮಾರುಕಟ್ಟೆಯಲ್ಲಿ ಶೇ. 25 ಪಾಲನ್ನು ವಶಪಡಿಸಿಕೊಳ್ಳುವ ಗುರಿಯನ್ನು ಅದಾನಿ ಹೊಂದಿದೆ.

ಮೂಲಗಳ ಪ್ರಕಾರ, ಕಂಪನಿಯು ಮುಂದಿನ ವರ್ಷ ಮಾನವರಹಿತ ಮತ್ತು ಸ್ವಾಯತ್ತ ವ್ಯವಸ್ಥೆಗಳು, ಸುಧಾರಿತ ಮಾರ್ಗದರ್ಶಿ ಶಸ್ತ್ರಾಸ್ತ್ರಗಳು, ಸಂವೇದಕಗಳು ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಎಐ–ಆಧಾರಿತ ಬಹು–ಡೊಮೇನ್ ಕಾರ್ಯಾಚರಣೆಗಳ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡಲಿದೆ.

ಗಾಳಿ, ಸಮುದ್ರ ಮತ್ತು ಭೂಮಿಯಲ್ಲಿ ಕಾರ್ಯನಿರ್ವಹಿಸುವ ಈ ಸ್ವಾಯತ್ತ ವ್ಯವಸ್ಥೆಗಳು ಕನಿಷ್ಠ ಮಾನವ ಹಸ್ತಕ್ಷೇಪದೊಂದಿಗೆ ಕಾರ್ಯನಿರ್ವಹಿಸುತ್ತವೆ, ಪಡೆಗಳಿಗೆ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ಮಿಲಿಟರಿ ವ್ಯಾಪ್ತಿಯನ್ನು ವಿಸ್ತರಿಸುತ್ತವೆ.

ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಭಾರತದ ಅತಿದೊಡ್ಡ ಖಾಸಗಿ ರಕ್ಷಣಾ ಕಂಪನಿಯಾಗಿದೆ. ಇದರ ಸಾಮರ್ಥ್ಯಗಳು ಮಾನವ ರಹಿತ ವೈಮಾನಿಕ ಮತ್ತು ಜಲಚರ ವ್ಯವಸ್ಥೆಗಳು, ಪ್ರತಿಬಂಧಕ ಯುಎಎಸ್ ಪರಿಹಾರಗಳು, ಮಾರ್ಗದರ್ಶಿ ಶಸ್ತ್ರಾಸ್ತ್ರಗಳು, ಸಣ್ಣ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ವಿಮಾನ ನಿರ್ವಹಣೆಯನ್ನು ಒಳಗೊಂಡಿವೆ. 2025ರಲ್ಲಿ, ಕಂಪನಿಯ ದೃಷ್ಟಿ 10 ಯುಎವಿಯನ್ನು ದೀರ್ಘ–ಶ್ರೇಣಿಯ ಗುಪ್ತಚರ, ಕಣ್ಗಾವಲು ಮತ್ತು ವಿಚಕ್ಷಣ ಕಾರ್ಯಾಚರಣೆಗಳಿಗಾಗಿ ಭಾರತೀಯ ನೌಕಾಪಡೆ ಮತ್ತು ಸೈನ್ಯಕ್ಕೆ ಸೇರಿಸಲಾಗುವುದು. 2026ರ ವೇಳೆಗೆ, ಅದಾನಿ ಸಂಸ್ಥೆಯು ಡ್ರೋನ್‌ಗಳ ಮೂಲಕ ಗಾಳಿ, ನೀರು ಮತ್ತು ಭೂಮಿಯಲ್ಲಿ ತನ್ನ ನಿಖರ ದಾಳಿ ಸಾಮರ್ಥ್ಯಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

# ರಾಜ್ಯ ಕ್ರಿಕೆಟ್ ಮಂಡಳಿ ಚುನಾವಣೆ....



**ಜೂ**ನ್ 4ರ ಆರ್.ಸಿ.ಬಿ. ವಿಜಯೋತ್ಸವ ಸಂದರ್ಭದ ಕಾಲ್ತುಳಿತದ ದುರ್ಘಟನೆಯ ನಂತರ ವಿವಾದಕ್ಕೆ ಒಳಗಾದ ಚಿನ್ನಸ್ವಾಮಿ ಕ್ರೀಡಾಂಗಣದ ಕೆಎಸ್‌ಸಿಎ ಆಡಳಿತ ಮಂಡಳಿಯ ಚುನಾವಣೆಯು ಕುತೂಹಲ ಮತ್ತು ರೋಚಕ ತಿರುವಿನೊಂದಿಗೆ ದಿನಾಂಕ: 06.12.2025 ರಂದು ಭಾರತ ತಂಡದ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಕೊನೆಗೊಂಡಿತು.

ಹಲವಾರು ವಿವಾದಕ್ಕೊಳಗಾಗಿ ಚುನಾವಣೆಯು ಮೀನಾಮೇಷಗಳ ನಡುವೆ ಮತ್ತು ಹೈಕೋರ್ಟ್ ಮೆಟ್ಟಿಲೇರಿದ್ದ ಟೀಮ್ ಬ್ರಿಜೇಶ್ ಬಣದಿಂದ ಕಠಿಣ ಸ್ಪರ್ಧೆಯುಂಟಾಗಿತ್ತು.

ಭಾನುವಾರ ಮಧ್ಯಾಹ್ನ ಚುರುಕು ಬಿಸಿಲು ಇದ್ದರೂ ಇದೇ ಅವಧಿಯಲ್ಲಿ ಮತದಾನವೂ ಚುರುಕಾಯಿತು. ನಾಡಿನ ದಿಗ್ಗಜ ಕ್ರಿಕೆಟಿಗರಾದ ಜಿ.ಆರ್. ವಿಶ್ವನಾಥ್, ಬಿ.ಎಸ್.ಚಂದ್ರಶೇಖರ್, ರೋಜರ್ ಬಿನ್ನಿ, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್ ಸೇರಿ ಹಲವರು ಮತ ಚಲಾಯಿಸಿದರು.

ಭಾನುವಾರ ನಡೆದ ಚುನಾವಣೆಯಲ್ಲಿ ಒಟ್ಟು 1307 ಮತಗಳು ಚಲಾವಣೆ ಆಗಿದ್ದು ಐವರು ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿಯ 11 ಸದಸ್ಯರ ಆಯ್ಕೆ ನಡೆಯಿತು. ಟೀಮ್ ಗೇಮ್ ಚೇಂಜರ್ಸ್ ಬಣದ ವೆಂಕಟೇಶ್ ಪ್ರಸಾದ್ ಅವರು 749 ಹಾಗೂ ಅವರ ಪ್ರತಿಸ್ಪರ್ಧಿ ಟೀಮ್ ಬ್ರಿಜೇಶ್ ಬಣದಿಂದ ಕಣಕ್ಕಿಳಿದಿದ್ದ ಕೆ.ಎನ್. ಶಾಂತಕುಮಾರ್ ಅವರು 558 ಮತಗಳಿಸಿದರು. ಪ್ರಸಾದ್ ಬಣದಿಂದ ಉಪಾಧ್ಯಕ್ಷ ಸ್ಥಾನಕ್ಕೆ ಮಾಜಿ ಕ್ರಿಕೆಟಿಗ ಸುಜಿತ್ ಸೋಮಸುಂದರ್ (719) ಅವರು ವಿನೋದ್ ಶಿವಪ್ಪ (588) ಎದುರು ಮೇಲುಗೈ ಸಾಧಿಸಿದರು. ಕಾರ್ಯದರ್ಶಿ ಸ್ಥಾನಕ್ಕೆ ಸಂತೋಷ್ ಮೆನನ್ (675) ಅವರು ಇ.ಎಸ್. ಜಯರಾಮ್ (632) ವಿರುದ್ಧ ಗೆದ್ದರು. ಬಿ.ಎನ್. ಮಧುಕರ್ (736) ಅವರು ಎಂ.ಎಸ್. ವಿನಯ್ (571) ಎದುರು ಜಯಿಸಿ, ಖಜಾಂಚಿ ಸ್ಥಾನ ಪಡೆದರು. ಬ್ರಿಜೇಶ್ ಬಣದಿಂದ ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿ.ಕೆ. ರವಿ (669) ಅವರು ಎ.ವಿ. ಶಶಿಧರ್ (638) ಎದುರು ಜಯಿಸಿದರು.

ಆಡಳಿತ ಸಮಿತಿಯಲ್ಲಿಯೂ ಬ್ರಿಜೇಶ್ ಬಣದ ವೀರಣ್ಣ ಸವಡಿ (ಧಾರವಾಡ ವಲಯ), ಡಿ.ಎಸ್.ಅರುಣ್ (ಶಿವಮೊಗ್ಗ), ಕುಶಾಲ್ ಪಾಟೀಲ ಗಡಗಿ (ರಾಯಚೂರು) ಚುನಾಯಿತರಾದರು. ಮಂಗಳೂರು ವಲಯದ ಶೇಖರ್ ಶೆಟ್ಟಿ ಅವಿರೋಧ ಆಯ್ಕೆಯಾದರು.

ಉಳಿದಂತೆ ಪ್ರಸಾದ್ ತಂಡದಿಂದ ವಿ.ಎಂ. ಮಂಜುನಾಥ್, ಶೈಲೇಶ್ ಪೋಳ್ (ಇಬ್ಬರೂ ಅಜೀವ ಸದಸ್ಯರ ವಿಭಾಗ), ಕಲ್ಪನಾ ವೆಂಕಟಾಚಾರ್, ಆಶಿಶ್ ಅಮರಲಾಲ್, ಅವಿನಾಶ್ ವೈದ್ಯ (ಬೆಂಗಳೂರು ವಲಯ), ಶ್ರೀನಿವಾಸ್ ಪ್ರಸಾದ್ (ಮೈಸೂರು) ಹಾಗೂ ಸಿ.ಆರ್.ಹರೀಶ್ (ತುಮಕೂರು) ಆಯ್ಕೆಯಾದರು.

'ಸಂಸ್ಥೆಯ ಸದಸ್ಯರು ನಮಗೆ ಸೇವೆ ಸಲ್ಲಿಸಲು ಅವಕಾಶ ಕೊಟ್ಟಿದ್ದಾರೆ. ಇದು ಕ್ರಿಕೆಟ್‌ಗೆ ಒಲಿದ ಗೆಲುವು. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಮಾಡಿರುವ ವಾಗ್ದಾನಗಳನ್ನು ಈಡೇರಿಸಲು ಬದ್ಧರಾಗಿದ್ದೇವೆ' ಎಂದು ಫಲಿತಾಂಶ ಪ್ರಕಟವಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟೇಶ್ ಪ್ರಸಾದ್ ಹೇಳಿದರು.

# ಬೆಟ್ಟದಾಸಪುರ: ಒಂದು ಐತಿಹಾಸಿಕ ತಾಣ

**ಬೆ**ಂಗಳೂರಿನ ಕಾಂಕ್ರೀಟ್ ಕಾಡಿನ ನಡುವೆ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಅದ್ಭುತ ಐತಿಹಾಸಿಕ ತಾಣ "ಬೆಟ್ಟದಾಸಪುರ". ಬೇಗೂರಿನ ಸಮೀಪವಿರುವ ಈ ಪ್ರದೇಶದ ಬಗ್ಗೆ ಅನೇಕ ರೋಚಕ ವಿಷಯಗಳನ್ನು ವಿಡಿಯೋಗಳ ಮೂಲಕ ಹಲವಾರು ಟಿ.ವಿ. ವಾಹಿನಿಗಳಲ್ಲಿ ಪ್ರಸಾರವಾಗುತ್ತಿರುತ್ತದೆ.

ಬೆಂಗಳೂರಿನ ಆಸುಪಾಸಿನಲ್ಲಿರುವ 40 ಎಕರೆ ಜಾಗವನ್ನು ಆವರಿಸಿಕೊಂಡಿರುವ ಈ ವಿಶಾಲವಾದ ಬೆಟ್ಟದ ವಿಶೇಷತೆ ಏನೆಂದರೆ ಗೌತಮ ಮಹರ್ಷಿಗಳು ತಪಸ್ಸು ಮಾಡಿ ಸಿದ್ಧಿ ಪಡೆದ ಪುಣ್ಯಭೂಮಿಯ ಹಿನ್ನೆಲೆಯಾಗಿದ್ದು, ತಿಮ್ಮರಾಯಸ್ವಾಮಿ ದೇವಸ್ಥಾನ: ಹರಿ–ಹರ (ತಿಮ್ಮರಾಯ ಮತ್ತು ಕಾಶಿ ವಿಶ್ವೇಶ್ವರ) ಒಂದೇ ಕಡೆ ನೆಲೆಸಿರುವ ಸುಮಾರು 1500 ವರ್ಷಗಳ ಪುರಾತನ ಕ್ಷೇತ್ರವೆಂದು ಪ್ರಸಿದ್ಧಿಯಾಗಿರುತ್ತದೆ. ನೂರಾರು ವರ್ಷಗಳಿಂದ ಶಿಥಿಲಗೊಂಡಿದ್ದ ಕೋಟೆಯನ್ನು ಪಾಳೇಗಾರ ದಾಸಪ್ಪ ನಾಯಕನು ಜೀರ್ಣೋದ್ಧಾರ ಮಾಡಿ, ಪೂಜಾ ಕೈಂಕರ್ಯಗಳನ್ನು ಪುನರಾರಂಭಿಸಿದ್ದು ಪ್ರದೇಶವಿದು. ಕೋಟೆಯ ಆವರಣದಲ್ಲಿರುವ ಕಮಲದ ಹೂವುಗಳಿಂದ ಕೂಡಿದ ವಿಶಾಲ ಕಲ್ಯಾಣಿ ಹಾಗೂ ಏಕಶಿಲಾ ಗರುಡಗಂಬದ ಶಿಲ್ಪವೈಭವ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ.

ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಬೆಟ್ಟದಾಸಪುರ ಇತ್ತೀಚಿನ ವರ್ಷಗಳಲ್ಲಿ ವೇಗವಾಗಿ ರೂಪಾಂತರಗೊಳ್ಳುತ್ತಿರುವ ಪ್ರದೇಶವಾಗಿ ಗುರುತಿಸಿಕೊಂಡಿದೆ. ಒಂದು ಕಾಲದಲ್ಲಿ ಶುದ್ಧ ಗ್ರಾಮೀಣ ವಾತಾವರಣ ಹೊಂದಿದ್ದ ಈ ಊರು, ಈಗ ನಗರೀಕರಣದ ಅಲೆ ಯೊಂದಿಗೆ ಹೊಸ ರೂಪ ಪಡೆದುಕೊಳ್ಳುತ್ತಿದೆ.

ಕನಕಪುರ ರಸ್ತೆಗೆ ಸಮೀಪವಿರುವ ಬೆಟ್ಟದಸಪುರ, ಗೊಟ್ಟಿಗೆರೆ, ಅಂಜನಾಪುರ ಹಾಗೂ ಕಾಗ್ಗಲಿಪುರ ರಸ್ತೆಯಂತಹ ಪ್ರಮುಖ ಪ್ರದೇಶಗಳಿಗೆ ಸಂಪರ್ಕ ಹೊಂದಿದೆ. ಈ ಭಾಗದಲ್ಲಿ ಬಿಎಂಟಿಸಿ ಬಸ್ ಸೇವೆ, ಸುಗಮ ರಸ್ತೆ ಸಂಪರ್ಕ ಹಾಗೂ ಮೂಲಸೌಕರ್ಯಗಳ ವೃದ್ಧಿ ಜನಜೀವನಕ್ಕೆ ಹೊಸ ಚೈತನ್ಯ ನೀಡಿದೆ. ಕಳೆದ ಕೆಲ ವರ್ಷಗಳಲ್ಲಿ ಅಪಾರ್ಟ್‌ಮೆಂಟ್‌ಗಳು, ಲೇಔಟ್‌ಗಳು, ಖಾಸಗಿ ಶಾಲೆಗಳು ಹಾಗೂ ಸಣ್ಣ ವಾಣಿಜ್ಯ ಮಳಿಗೆಗಳು ಬೆಳೆಯುತ್ತಿರುವುದು ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಇದರ ಪರಿಣಾಮವಾಗಿ, ಕೃಷಿ ಆಧಾರಿತ ಜೀವನದಿಂದ ಉದ್ಯೋಗ ಮತ್ತು ಸೇವಾ ಕ್ಷೇತ್ರಗಳತ್ತ ಜನರ ಒಲವು ಹೆಚ್ಚಾಗಿದೆ. ಆದರೂ, ನಗರೀಕರಣದೊಂದಿಗೆ ನೀರು ಸರಬರಾಜು, ರಸ್ತೆ ವಿಸ್ತರಣೆ, ಒಳಚರಂಡಿ ವ್ಯವಸ್ಥೆಯಂತಹ ಸವಾಲುಗಳು ಕೂಡ ಎದುರಾಗುತ್ತಿವೆ. ಸ್ಥಳೀಯ ನಿವಾಸಿಗಳು ಯೋಜಿತ ಅಭಿವೃದ್ಧಿಗೆ ಒತ್ತಾಯಿಸುತ್ತಿದ್ದು, ಆಡಳಿತಾತ್ಮಕ ಸ್ಪಷ್ಟತೆ ಮತ್ತು ಮೂಲಸೌಕರ್ಯಗಳ ಸಮಗ್ರ ವಿಸ್ತರಣೆಗೆ ಬೇಡಿಕೆ ಇಟ್ಟಿದ್ದಾರೆ. ಒಟ್ಟಾರೆ, ಬೆಟ್ಟದಾಸಪುರ ಇಂದು ಗ್ರಾಮ ಮತ್ತು ನಗರದ ನಡುವಿನ ಸಂಧಿಕಾಲವನ್ನು ಅನುಭವಿಸುತ್ತಿದ್ದು, ಮುಂದಿನ ದಿನಗಳಲ್ಲಿ ದಕ್ಷಿಣ




ಬೆಂಗಳೂರಿನ ಪ್ರಮುಖ ವಾಸಸ್ಥಳವಾಗಿ ಬೆಳೆಯುವ ಸಾಧ್ಯತೆಗಳನ್ನು ಹೊತ್ತಿದೆ. ಒಂದು ಕಾಲದಲ್ಲಿ ವಿಧಾನಸೌಧದಿಂದಲೇ ಕಾಣಿಸುತ್ತಿದ್ದ ಈ ಬೆಟ್ಟದ ಮೇಲಿನ ಅರಳಿ ಮರ ಇಂದು ನಗರೀಕರಣದಿಂದ ಹೇಗೆ ಮರೆಯಾಗುತ್ತಿದೆ ಎಂಬುದೇ ಈ ಪ್ರದೇಶದ ಜನರ ಕಳಕಳಿ.

# ದೇಶೀ ಕ್ರಿಕೆಟ್ ಶತಕಗಳ ಸುರಿಮಳೆ ದಾಖಲೆಗಳ ಭರಾಟೆ



**ಭಾ**ರತದ ಪ್ರಮುಖ ದೇಶೀಯ ಏಕದಿನ ಕ್ರಿಕೆಟ್ ಟೂರ್ನಮೆಂಟ್ ಆದ ವಿಜಯ್ ಹಜಾರೆ ಟ್ರೋಫಿ 2025–26 ಡಿಸೆಂಬರ್ 24ರಂದು ಭರ್ಜರಿ ಆರಂಭ ಕಂಡಿತು. ದೇಶದ ವಿವಿಧ ಕ್ರೀಡಾಂಗಣಗಳಲ್ಲಿ ಎಲೈಟ್ ಮತ್ತು ಪ್ಲೇಟ್ ವಿಭಾಗದ ಪಂದ್ಯಗಳು ನಡೆಯುತ್ತಾ, ರನ್‌ಗಳ ಸುರಿಮಳೆ, ರೋಚಕ ಹೋರಾಟ ಮತ್ತು ದಾಖಲೆ ಸಾಧನೆಗಳೊಂದಿಗೆ ಕ್ರಿಕೆಟ್ ಅಭಿಮಾನಿಗಳನ್ನು ರಂಜಿಸಿವೆ.

ಎಲೈಟ್ ವಿಭಾಗದಲ್ಲಿ, ವಿದರ್ಭ ವಿರುದ್ಧ ಬಂಗಾಳ ತಂಡ ಭಾರೀ ಗುರಿಯನ್ನು ಯಶಸ್ವಿಯಾಗಿ ಬೆನ್ನತ್ತಿ ಗೆಲುವು ಸಾಧಿಸಿತು. ಪಂಜಾಬ್ ಮಹಾರಾಷ್ಟ್ರವನ್ನು ಸ್ಪಷ್ಟ ಅಂತರದಲ್ಲಿ ಮಣಿಸಿತು. ಮುಂಬೈ ಸಿಕ್ಕಿಂ ವಿರುದ್ಧ ಸುಲಭ ಜಯ ದಾಖಲಿಸಿತು. ಇದರ ಜೊತೆಗೆ ಮಧ್ಯ ಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ, ಗುಜರಾತ್, ದೆಹಲಿ, ಬರೋಡಾ ಹಾಗೂ ಸೌರಾಷ್ಟ್ರ ತಂಡಗಳು ತಮ್ಮ ಆರಂಭಿಕ ಪಂದ್ಯಗಳಲ್ಲಿ ಜಯಭೇರಿ ಬಾರಿಸಿದವು.

ದೆಹಲಿ ತಂಡದ ಪರ ಕಣಕ್ಕಿಳಿದ 'ಚೇಸಿಂಗ್ ಮಾಸ್ಟರ್' ವಿರಾಟ್ ಕೊಹ್ಲಿ ಏಳು ತಿಂಗಳುಗಳ ನಂತರ ಬೆಂಗಳೂರಿನಲ್ಲಿ ಆಟ ವಾಡಿದರು. ಆಂಧ್ರ ಎದುರು ಭರ್ಜರಿ ಶತಕ ದಾಖಲಿಸಿದರು. ದೆಹಲಿ ತಂಡವು 4 ವಿಕೆಟ್‌ಗಳಿಂದ ಗೆದ್ದಿತು.

ಕ್ರಿಸ್‌ಮಸ್ ಮುನ್ನಾ ದಿನವಾದ ಬುಧವಾರ ಆರಂಭವಾದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ರನ್‌ಗಳ ಹೊಳೆ ಹರಿಯಿತು.

ದೇಶಿ ಕ್ರಿಕೆಟ್ ಇತಿಹಾಸದ ಪುಟದಲ್ಲಿ ದಾಖಲೆಗಳು ಸೇರಿದವು. 14ರ ಪೋರ ವೈಭವ್ ಸೂರ್ಯವಂಶಿ, ದಿಗ್ಗಜರಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಅನುಭವಿ ಇಶಾನ್ ಕಿಶನ್ ಸೇರಿದಂತೆ ಹಲವಾರು ಶತಕ ಹೊಡೆದರು.

147(118) ದೇವದತ್ತ ಪಡಿಕ್ಕಲ್, 190(84) ವೈಭವ ಸೂರ್ಯವಂಶಿ, 128*(40) ಸಕೀಬುಲ್ ಗನಿ, 155(94) ರೋಹಿತ್ ಶರ್ಮಾ, 131 (101) 4x14, 6x3 ವಿರಾಟ್ ಕೊಹ್ಲಿ=ಒಂದೇ ದಿನ 22 ಶತಕ.

ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಟೂರ್ನಿಯಲ್ಲಿ ಭರ್ಜರಿ ಆರಂಭವಾಡಿತು. ಅಹಮದಾಬಾದಿನಲ್ಲಿ ನಡೆದ ಎ ಗುಂಪಿನ ಮೊದಲ ಪಂದ್ಯದಲ್ಲಿ ಜಾರ್ಖಂಡ್ ತಂಡ ನೀಡಿದ್ದ 413 ರನ್‌ಗಳ ಗುರಿಯನ್ನು 15 ಎಸೆತಗಳು ಬಾಕಿಯಿರುವಾಗಲೇ ಸಾಧಿಸಿತು. ಅತಿ ದೊಡ್ಡ ಗುರಿ ಬೆನ್ನಟ್ಟಿ ಗೆದ್ದ ದಾಖಲೆ ಕರ್ನಾಟಕದ್ದಾಯಿತು. ದೇವದತ್ತ ಪಡಿಕ್ಕಲ್ ಅಮೋಘ ಶತಕ (147) ಗಳಿಸಿ ಕರ್ನಾಟಕದ ಗೆಲುವಿನ ರೂವಾರಿ ಯಾದರು. ಬೆಂಗಳೂರು ಹೊರವಲಯದ ಆಲೂರಿನಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಒಡಿಶಾ ತಂಡದ ಆರಂಭ ಆಟಗಾರ ಸ್ವಸ್ತಿಕ್ (212; 1692, 21 ಬೌಂಡರಿ, ಸಿಕ್ಸರ್) ದ್ವಿಶತಕ ಹೊಡೆದರು.

ಇದಕ್ಕೂ ಮುನ್ನ ಜಾರ್ಖಂಡ್ ತಂಡ ನಾಯಕ ಇಶಾನ್ (125,39ಎ) ಅವರು ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಭಾರತದ ಆಟಗಾರರ ಪೈಕಿ ಎರಡನೇ ಅತಿ ವೇಗದ ಶತಕ (33) ದಾಖಲಿಸಿದರು. ರೋಹಿತ್ ಅಬ್ಬರ: ಮುಂಬೈ ತಂಡದ ರೋಹಿತ್ ಶರ್ಮಾ ಅವರು ದೀರ್ಘ ಕಾಲದ ನಂತರ ದೇಶಿ ಏಕದಿನ ಕಣಕ್ಕಿಳಿದರು. ಸಿಕ್ಕಿಂ ಎದುರು ರೋಹಿತ್ 94 ಎಸೆತಗಳಲ್ಲಿ 155 ರನ್ ಗಳಿಸಿದರು. ದಾಖಲೆ 'ವೈಭವ': ರಾಂಚಿಯಲ್ಲಿ ನಡೆದ ಪಂದ್ಯದಲ್ಲಿ 14 ವರ್ಷದ ಪೋರ ವೈಭವ ಸೂರ್ಯವಂಶಿ 36 ಎಸೆತಗಳಲ್ಲಿ ಶತಕ ದಾಖಲಿಸಿದರು. ಅವರು 84 ಎಸೆತಗಳಲ್ಲಿ 190




ರನ್ ಹೊಡೆದರು. ಅದರಲ್ಲಿ 16 ಬೌಂಡರಿ, 15 ಸಿಕ್ಸರ್‌ಗಳು ಸೇರಿವೆ. ಬಿಹಾರದ ಆಯುಷ್ ಲೋರುಖಾ (116 ರನ್) ಮತ್ತು ಸಕೀಬುಲ್ ಗನಿ (ಔಟಾಗದೇ 128, 40ಎ) ಶತಕ ಗಳಿಸಿದರು. ಸಕೀಬುಲ್ ಅವರು 32 ಎಸೆತಗಳಲ್ಲಿ ಮೂರಂಕಿ ದಾಟುವ ಮೂಲಕ ಭಾರತದ ಆಟಗಾರರ ಪೈಕಿ ಅತಿ ವೇಗದ ಶತಕ (32ಎ) ದಾಖಲಿಸಿದರು. ಇದರಿಂದಾಗಿ ತಂಡವು 6 ವಿಕೆಟ್‌ಗಳಿಗೆ 574 ರನ್ ಗಳಿಸಿತು. ವಿಜಯ್ ಹಜಾರೆ ಟೂರ್ನಿ ಇತಿಹಾಸದಲ್ಲಿಯೇ ಇದು ಗರಿಷ್ಠ ಮೊತ್ತ ವಾಗಿದೆ. ಪಂದ್ಯದಲ್ಲಿ ಬಿಹಾರವು 397 ರನ್ ಗಳಿಂದ ಜಯಿಸಿದ್ದು ದಾಖಲೆ.









Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.